ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ

ವಿಷಯ ಸೂಚಿ

1. ನಿರ್ದೇಶಕರ ಮಂಡಳಿ 36

2. ಸೂಚನೆ 37

3. ನಿರ್ದೇಶಕರ ವರದಿ 38

4. ಶಾಸನಬದ್ಧ ಲೆಕ್ಕ ಪರಿಶೋಧಕರ ವರದಿ 59

5. ಭಾರತದ ಕಂಪ್ಟ್ರೋಲರ್ ಮತ್ತು
ಆಡಿಟರ್ ಜನರಲ್‌ರವರ ಟೀಕೆ ಟಿಪ್ಪಣಿಗಳು 66

6. ಲೆಕ್ಕ ಪತ್ರಗಳ ಮಹತ್ವದ ನೀತಿಗಳು 67

7. 2013–14 ರ ವಾರ್ಷಿಕ ಲೆಕ್ಕಪತ್ರಗಳು 71

8. ನಗದು ಹರಿವು ತಃಖ್ತೆ 122

68ನೇ ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳು

2013–14

ದಿ ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ

ನೋಂದಾಯಿತ ಕಛೇರಿ : ಮೂರನೆ ಮಹಡಿ, ಕೆಹೆಚ್‌ಬಿ ಕಾಂಪ್ಲೆಕ್ಸ್, ನ್ಯಾಷನಲ್ ಗೇಮ್ಸ್ ವಿಲೇಜ್,
ಕೋರಮಂಗಲ ಬೆಂಗಳೂರು– 560047

ನಿರ್ದೇಶಕರ ಮಂಡಳಿ

ಅಧ್ಯಕ್ಷರು : **ಶ್ರೀ ಕೆ. ಅಮರನಾರಾಯಣ, ಐಎಎಸ್** (21.10.2012 ರಿಂದ 7.9.2013ರ ವರಗೆ)
ಶ್ರೀ ಎಸ್.ವಿ. ರಾಮಚಂದ್ರ (19.11.2010 ರಿಂದ 14.5.2013ರ ವರಗೆ)
ಶ್ರೀ ತುಷಾರ್ ಗಿರಿನಾಥ್, ಐಎಎಸ್ (7.9.2013 ರಿಂದ)

ವ್ಯವಸ್ಥಾಪಕ ನಿರ್ದೇಶಕರು : **ಶ್ರೀ ಎ.ಕೆ. ಮೊನ್ನಪ್ಪ, ಐಎಎಸ್** (1.10.2011 ರಿಂದ)

ನಿರ್ದೇಶಕರುಗಳು :

ಶ್ರೀ ಅರವಿಂದ ಶ್ರೀವಾಸ್ತವ, ಐಎಎಸ್
(13.6.2013 ರಿಂದ)

ಶ್ರೀ ಹೆಚ್. ಭಾಸ್ಕರ್, ಐಎಎಸ್
(1.10.2013 ರಿಂದ)

ಶ್ರೀ ಎಸ್. ಶಂಕರನಾರಾಯಣ ಐಎಎಸ್
(1.10.2013 ರಿಂದ)

ಶ್ರೀ ರಾಜೀವ್ ಚಾವ್ಲ, ಐಎಎಸ್
(14.6.2013 ರಿಂದ)

ಶ್ರೀ ಅಜಯ್ ಸೇಠ್, ಐಎಎಸ್
(5.8.2008 ರಿಂದ 13.6.2013ರ ವರೆಗೆ)

ಶ್ರೀ ಹೆಚ್.ಆರ್. ಶ್ರೀನಿವಾಸ, ಐಎಎಸ್
(1.12.2010 ರಿಂದ 1.10.2013ರ ವರೆಗೆ)

ಶ್ರೀ ಎಂ. ಮಹೇಶ್ವರ ರಾವ್, ಐಎಎಸ್
(12.10.2012 ರಿಂದ 14.6.2013ರ ವರೆಗೆ)

ಶ್ರೀ ಎಸ್. ದಯಾಶಂಕರ್, ಐಎಎಸ್
(18.2.2009 ರಿಂದ 14.6.2013ರ ವರೆಗೆ)

ಶ್ರೀ ಕೆ. ಶಿವರಾಂ, ಐಎಎಸ್
(2.3.2012 ರಿಂದ 14.6.2013ರ ವರೆಗೆ)

ಶ್ರೀ ಪಿ.ಎಸ್. ಕಾಂತರಾಜ್, ಕೆಎಎಸ್
(1.10.2013 ರಿಂದ 26.7.2014ರ ವರೆಗೆ)

ಶ್ರೀ ಜಿ.ಎ. ಅಡಗಟ್ಟಿ, ಕೆಎಎಸ್
(14.6.2013 ರಿಂದ 1.10.2013ರ ವರೆಗೆ)

ಶಾಸನಬದ್ಧ ಲೆಕ್ಕ ಪರಿಶೋಧಕರು

ಮೆ: ಸುಭಾಶ್‌ಚಂದ್ರ ಪಿ. ಕುದರಿ & ಕಂ.
ಛಾರ್ಟರ್ಡ್ ಅಕೌಂಟೆಂಟ್ಸ್
ನಂ. 15, 1ನೇ ಮಹಡಿ, 1ನೇ ಅಡ್ಡರಸ್ತೆ,
ನೆಹರುನಗರ, ಶೇಷಾದ್ರಿಪುರಂ,
ಬೆಂಗಳೂರ–560 020

ವೆಚ್ಚದ ಲೆಕ್ಕ ಪರಿಶೋಧಕರು

ಕೆ.ಪಿ.ಆರ್. ಅಸೋಸಿಯಟ್ಸ್
ಫ್ಲಾಟ್ ನಂ. 201, ಶರಾವತಿ ಬ್ಲಾಕ್
ಎ–1, ನ್ಯಾಷನಲ್ ಗೇಮ್ಸ್ ವಿಲೇಜ್,
ಕೋರಮಂಗಲ,
ಬೆಂಗಳೂರು– 560047

ಬ್ಯಾಂಕರುಗಳು

ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್
ಬೆಂಗಳೂರು ಮತ್ತು ಹಟ್ಟಿ

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ
ರಾಯಚೂರು

ಕೆನರಾ ಬ್ಯಾಂಕ್
ಬೆಂಗಳೂರು ಮತ್ತು ಚಿತ್ರದುರ್ಗ

ಸಿಂಡಿಕೇಟ್ ಬ್ಯಾಂಕ್
ಬೆಂಗಳೂರು ಮತ್ತು ಹಟ್ಟಿ

ಐಎನ್‌ಜಿ ವೈಶ್ಯ ಬ್ಯಾಂಕ್
ಬೆಂಗಳೂರು

ಆಕ್ಸಿಸ್ ಬ್ಯಾಂಕ್ ಲಿ.
ಬೆಂಗಳೂರು

ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ
ಬೆಂಗಳೂರು

ದಿ ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನೋಂದಾಯಿತ ಕಛೇರಿ : ಮೂರನೆ ಮಹಡಿ, ಕೆಹೆಚ್‌ಬಿ ಕಾಂಪ್ಲೆಕ್ಸ್, ನ್ಯಾಷನಲ್ ಗೇಮ್ಸ್ ವಿಲೇಜ್, ಕೋರಮಂಗಲ, ಬೆಂಗಳೂರು– 560047
ದೂರವಾಣಿ : 25705723/25705724/25705725/ ಫ್ಯಾಕ್ಸ್ : 25718365.
ಇ–ಮೇಲ್ : hgml@vsnl.com ವೆಬ್‌ಸೈಟ್ :www.huttigold.co.in

ಸೂಚನೆ

ದಿ ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತದ ಸದಸ್ಯರ **68ನೇ ವಾರ್ಷಿಕ ಸಾಮಾನ್ಯ ಸಭೆಯನ್ನು 20ನೇ ಸೆಪ್ಟೆಂಬರ್ 2014ನೇ ಶನಿವಾರ ಮಧ್ಯಾಹ್ನ 12.00 ಗಂಟೆಗೆ** ಕಂಪನಿಯ ನೊಂದಾಯಿತ ಕಛೇರಿ, 3ನೇ ಮಹಡಿ, ಕೆಹೆಚ್‌ಬಿ ಶಾಪಿಂಗ್ ಕಾಂಪ್ಲೆಕ್ಸ್, ಕೋರಮಂಗಲ, ಬೆಂಗಳೂರು–560 047ರಲ್ಲಿ ಈ ಕೆಳಕಂಡ ವ್ಯವಹಾರಗಳನ್ನು ನಡೆಸಲು ಕರೆಯಲಾಗಿದೆಯೆಂದು ಸೂಚನೆಯನ್ನು ಈ ಮೂಲಕ ನೀಡಲಾಗಿದೆ.

ಸಾಮಾನ್ಯ ವಹಿವಾಟುಗಳು

1. ದಿನಾಂಕ 31.3.2014ಕ್ಕೆ ಅಂತ್ಯವಾಗುವಂತೆ, ನಿರ್ದೇಶಕರುಗಳು ಮತ್ತು ಲೆಕ್ಕ ಪರಿಶೋಧಕರ ವರದಿ, ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್‌ರವರ ಟೀಕೆ ಟಿಪ್ಪಣಿಗಳೊಂದಿಗೆ ಸ್ಥಿತಿ ವಿವರಣಾ ಪಟ್ಟಿ ಮತ್ತು 31–03–2014 ರಂದು ಕೊನೆಗೊಂಡ ವರ್ಷಕ್ಕೆ ಲಾಭ ಮತ್ತು ನಷ್ಟದ ಲೆಕ್ಕಗಳ ಸ್ವೀಕಾರ, ಪರಿಗಣನೆ ಮತ್ತು ಅಂಗೀಕಾರ.
2. ಈಕ್ವಿಟಿ ಷೇರುದಾರರಿಗೆ ಲಾಭಾಂಶ ಘೋಷಣೆ.
3. ಕಂಪನಿಯ ಲೆಕ್ಕ ಪರಿಶೋಧಕರಿಗೆ ಲೆಕ್ಕ ಪರಿಶೋಧನಾ ಶುಲ್ಕ ನಿಗದಿ.

ಆಡಳಿತ ಮಂಡಳಿಯ ಆದೇಶದ ಮೇರೆಗೆ

(ಸಹಿ)
(ಎ. ಕೆ. ಮೊನ್ನಪ್ಪ)
ವ್ಯವಸ್ಥಾಪಕ ನಿರ್ದೇಶಕರು

ಬೆಂಗಳೂರು
ದಿನಾಂಕ : 28ನೇ ಆಗಸ್ಟ್ 2014

ಟಿಪ್ಪಣಿಗಳು :

1. ಮತದಾನ ಮಾಡುವ ಹಕ್ಕುಳ್ಳ ಸದಸ್ಯರು, ತಮಗೆ ಬದಲಾಗಿ ಸಭೆಯಲ್ಲಿ ಭಾಗವಹಿಸಲು ಮತ್ತು ಮತದಾನದಲ್ಲಿ ಮತಹಾಕಲು ಒಬ್ಬ ಪ್ರತಿನಿಧಿಯನ್ನು ನೇಮಿಸಲು ಹಕ್ಕುಳ್ಳವರಾಗಿರುತ್ತಾರೆ. ಹಾಗೆ ನೇಮಕಗೊಂಡ ಯಾವುದೇ ವ್ಯಕ್ತಿಯು ಕಂಪನಿಯ ಸದಸ್ಯನಾಗಿರಬೇಕಾಗಿಲ್ಲ. ಪ್ರತಿನಿಧಿಯು ಪರಿಣಾಮಕಾರಿಯಾಗಿರಬೇಕಾದರೆ, ಸಭೆಯು ಪ್ರಾರಂಭವಾಗುವುದಕ್ಕೆ 48 ಗಂಟೆಗಳಿಗೆ ಕಡಿಮೆ ಇಲ್ಲದಂತೆ ಕಂಪನಿಯ ನೋಂದಾಯಿತ ಕಛೇರಿಯಲ್ಲಿ ದಾಖಲು ಮಾಡಿಕೊಳ್ಳಬೇಕು.
2. ಕಂಪನಿಯ ಸದಸ್ಯರುಗಳ ರಿಜಿಸ್ಟರು ಮತ್ತು ಷೇರು ವರ್ಗಾವಣೆ ಪುಸ್ತಕಗಳು 14ನೇ ಸೆಪ್ಟೆಂಬರ್ 2014 ರಿಂದ 20ನೇ ಸೆಪ್ಟೆಂಬರ್ 2014ರ ರವರೆಗೆ (ಎರಡು ದಿನಗಳೂ ಸೇರಿದಂತೆ) ಮುಚ್ಚಿರುತ್ತವೆ.
3. ಘೋಷಿಸಲಾದ ಲಾಭಾಂಶವನ್ನು 20ನೇ ಸೆಪ್ಟೆಂಬರ್ 2014ರಲ್ಲಿದ್ದಂತೆ, ಸದಸ್ಯರುಗಳ ರಿಜಿಸ್ಟರ್‌ನಲ್ಲಿ ನಮೂದಾಗಿರುವ ಸದಸ್ಯರುಗಳಿಗೆ ವಿತರಿಸಲಾಗುವುದು.

2013–14ನೇ ಸಾಲಿಗೆ ಸದಸ್ಯರಿಗೆ ನಿರ್ದೇಶಕರ ವರದಿ

ಪ್ರಿಯ ಸದಸ್ಯರೇ,

ದಿನಾಂಕ 31–03–14ಕ್ಕೆ ಅಂತ್ಯಗೊಂಡ ವರ್ಷದ ಕಂಪನಿಯ ಲೆಕ್ಕ ಪರಿಶೋಧನಾ ವರದಿ ಸಹಿತ 68ನೇ ವಾರ್ಷಿಕ ವರದಿಯನ್ನು ತಮ್ಮ ಮುಂದಿಡಲು ನಿಮ್ಮ ನಿರ್ದೇಶಕರುಗಳು ಹರ್ಷಿಸುತ್ತಾರೆ.

ಸಂಸ್ಥಾ ದೃಷ್ಟಿ ಮತ್ತು ಧ್ಯೇಯ :

- **ಸಂಸ್ಥಾ ದೃಷ್ಠಿ –** ಶಕ್ತಿಯುತ, ಸ್ವಾವಲಂಬಿ ಹಾಗೂ ಮಹತ್ತರ ಗಣಿ ಕಂಪನಿಯಾಗುವುದು.
- **ಸಂಸ್ಥಾ ಧ್ಯೇಯ –** ಸುರಕ್ಷೆ ಮತ್ತು ಆರೋಗ್ಯಕರ ಗಣಿಗಾರಿಕೆಯ ವಾತಾವರಣವನ್ನು ನಿರ್ಮಿಸುವುದು ಮತ್ತು ದೀರ್ಘಕಾಲೀನ ಬೆಳವಣಿಗೆ ಮತ್ತು ಅಭಿವೃದ್ಧಿ ಸಾಧಿಸುವುದು ಮತ್ತು ಉತ್ಪಾದಕತೆ ಮತ್ತು ಲಾಭವನ್ನು ಹೆಚ್ಚಿಸುವುದು; ಉತ್ತಮವಾದ ಮಾನವ ಸಂಪನ್ಮೂಲವನ್ನು ಅಭಿವೃದ್ಧಿ ಪಡಿಸಲೋಸುಗ ಕೈಗಾರಿಕಾ ಸಂಬಂಧವನ್ನು ಮತ್ತೂ ಉತ್ತೇಜಿಸುವುದು; ಹಟ್ಟಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸುಸ್ಥಿತಿ ಮತ್ತು ಸಮುದಾಯ ಕಾರ್ಯಕ್ರಮಗಳನ್ನು ಉತ್ತೇಜಿಸುವುದು; ಆಧುನಿಕ ಮತ್ತು ಪರಿಣಾಮಕಾರಿಯಾದ ನಿರ್ವಹಣಾ ನಿಯಂತ್ರಣಗಳನ್ನು ಅಳವಡಿಸುವುದು.

ಉತ್ಪಾದನೆ ಮತ್ತು ನಿರ್ವಹಣಾ ಫಲಿತಾಂಶಗಳು

ಕ್ರಮ ಸಂಖ್ಯೆ	ವಿವರಗಳು	2013-14ರ ಆರ್ಥಿಕ ವರ್ಷ		2012-13ರ ಆರ್ಥಿಕ ವರ್ಷ	
		ಉದ್ದೇಶಿತ	ವಾಸ್ತವ	ಉದ್ದೇಶಿತ	ವಾಸ್ತವ
1.	**ಅರೆಯಲಾದ/ಸಂಸ್ಕರಿಸಲಾದ** ಅದಿರು(ಮೆಟ್ರಿಕ್‌ಟನ್ನುಗಳಲ್ಲಿ)				
	ಹಟ್ಟಿ ಗಣಿ	**5,28,000**	**4,86,729**	5,35,700	4,86,539
	ಊಟಿ ಗಣಿ	**66,000**	**55,124**	89,900	90,614
	ಹೀರಾಬುದ್ದಿನಿ ಗಣಿ	**33,000**	**25,513**	44,100	21,937
	ಒಟ್ಟು	**6,27,000**	**5,67,366**	6,69,700	5,99,090
2.	**ಉತ್ಪಾದಿಸಲಾದ ಚಿನ್ನ(ಗ್ರಾಂಗಳಲ್ಲಿ)**	**20,69,490**	**15,56,455**	23,67,844	15,82,001
3.	**ವಾಯುಯಂತ್ರಗಳಿಂದ ವಿದ್ಯುಚ್ಛಕ್ತಿ** (ಕಿಲೋವ್ಯಾಟ್ಸ್)	**3,15,00,000**	**3,04,77,528**	3,15,00,000	2,99,90,698
4.	**ವಹಿವಾಟು(ಲಕ್ಷ ರೂ.ಗಳಲ್ಲಿ)**				
	ಚಿನ್ನ ಮತ್ತು ಬೆಳ್ಳಿಯ ಮಾರಾಟ (ಅಬ್ಕಾರಿ ಶುಲ್ಕ ಹೊರತುಪಡಿಸಿ)	**55876.23**	**39329.04**	57366.94	50485.88
	ವಾಯು ಉತ್ಪಾದಿತ ವಿದ್ಯುಚ್ಛಕ್ತಿ	**1071.00**	**1036.24**	1071.00	1019.68
	ಒಟ್ಟು	**56947.23**	**40365.34**	58437.94	51505.58

5.	**ಲಾಭ(ಲಕ್ಷ ರೂ.ಗಳಲ್ಲಿ)**				
	ಬಡ್ಡಿ, ಸವಕಳಿ ಮತ್ತು ತೆರಿಗೆಯ ಮುಂಚಿನ ಲಾಭ	27270.20	16043.38	30342.70	27189.69
	ವರ್ಷದ ನಿವ್ವಳ ಲಾಭ	11211.42	8961.06	19081.10	16949.66

ಮೇಲ್ಕಂಡ ಅಂಕಿ ಅಂಶಗಳಿಂದ ಈ ಕೆಳಗಿನವುಗಳನ್ನು ಗುರುತಿಸಬಹುದು.

1. ಪ್ರಸ್ತುತ ವರ್ಷದಲ್ಲಿ ಅರೆಯಲಾದ/ಸಂಸ್ಕರಿಸಲಾದ ಅದಿರು 5,67,366 ಟನ್ನಾಗಿದ್ದು, ಅದು ಕಳೆದ ವರ್ಷ 2012–13ರಲ್ಲಿ ಅರೆಯಲಾದ/ಸಂಸ್ಕರಿಸಲಾದ 5,99,090 ಟನ್‌ಗಳ ಅದುರಿಗೆ ಹೋಲಿಸಿದಾಗ ಶೇ. 5.30ರಷ್ಟು ಕಡಿಮೆಯಾಗಿದೆ.

2. ಕಳೆದ ವರ್ಷ 2012–13 ರಲ್ಲಿ ಉತ್ಪಾದಿಸಲಾದ 15,82,000 ಗ್ರಾಂ ಚಿನ್ನದ ಬದಲಿಗೆ ಪ್ರಸ್ತುತ ವರ್ಷದಲ್ಲಿ ಶೇ.1.61ರಷ್ಟು ಕಡಿಮೆ ಎಂದರೆ 15,56,456 ಗ್ರಾಂ ಚಿನ್ನವನ್ನು ಉತ್ಪಾದಿಸಲಾಯಿತು. ಅದುರಿನಲ್ಲಿರುವ ಕಡಿಮೆ ದರ್ಜೆಯ ಅದಿರು ಟನ್ ಒಂದಕ್ಕೆ 2.74 ಗ್ರಾಂ ಗಳಾಗಿದ್ದು, ಅದು ಕಳೆದ ಸಾಲಿನಲ್ಲಿ ಟನ್ ಒಂದಕ್ಕೆ ಇದ್ದ 2.64 ಗ್ರಾಂಗಳಾಗಿದ್ದಿತು.

3. ಪ್ರಸ್ತುತ ವರ್ಷದಲ್ಲಿನ ಚಿನ್ನ ಮತ್ತು ಬೆಳ್ಳಿಯ ಉತ್ಪಾದನಾ ಮೌಲ್ಯವು 42,863 ಲಕ್ಷ ರೂ.ಗಳಾಗಿದ್ದು, ಕಳೆದ ವರ್ಷ ಅದು 52400 ಲಕ್ಷ ರೂ.ಗಳಾಗಿ, 18.20% ರಷ್ಟು ಕಡಿಮೆಯಾಗಿದೆ.

4. ಪ್ರಸ್ತುತ ವರ್ಷದಲ್ಲಿ ಮಾರಾಟ ಮಾಡಲಾದ 1449 ಕೆ.ಜಿ. ಚಿನ್ನವನ್ನು ಕಳೆದ ವರ್ಷದ 1737 ಕೆ.ಜಿ. ಚಿನ್ನಕ್ಕೆ ಹೋಲಿಸಿದಾಗ ಶೇ.16.50ರಷ್ಟು ಕಡಿಮೆಯಾಗಿದೆ. ಇದಕ್ಕೆ ಹಿಂದಿನ ವರ್ಷದ ಮಾರುಕಟ್ಟೆಯಲ್ಲಿನ ದರಕ್ಕೆ ಹೋಲಿಸಿದಾಗ ಪ್ರಸ್ತುತ ವರ್ಷದಲ್ಲಿನ ಕಡಿಮೆ ದರವೇ ಕಾರಣವಾಗಿದೆ.

5. ಚಿನ್ನ/ಬೆಳ್ಳಿಯ ಮಾರಾಟ ಮೌಲ್ಯವು 39,329 ಲಕ್ಷಗಳಾಗಿದ್ದು ಕಳೆದ ವರ್ಷದ 50,486 ಲಕ್ಷ ರೂ.ಗಳಿಗೆ ಹೋಲಿಸಿದಾಗ ಶೇ. 22.10 ರಷ್ಟು ಕಡಿಮೆಯಾಗಿದೆ. ಚಿನ್ನದ ಸರಾಸರಿ ಬೆಲೆಯು ಪ್ರತಿ ಗ್ರಾಂ.ಗೆ ರೂ. 2,709 ಆಗಿದ್ದು ಅದು ಕಳೆದ ವರ್ಷದ ರೂ. 2,901 ಆಗಿದ್ದಿತು.

6. ಕಳೆದ ವರ್ಷದ 2,99,90,698 kwhಗೆ ಹೋಲಿಸಿದಾಗ ಪ್ರಸ್ತುತ ವರ್ಷದಲ್ಲಿ ಉತ್ಪಾದಿಸಿ ಮಾರಾಟ ಮಾಡಿದ ವಾಯು ವಿದ್ಯುಚ್ಛಕ್ತಿಯು 3,04,77,528 kwhಗಳಾಗಿದ್ದು, ಇದು ಶೇ.1.62 ರಷ್ಟು ಏರಿಕೆಯಾಗಿದೆ. ಕಳೆದ ವರ್ಷದ 1,019.68 ಲಕ್ಷ ರೂ.ಗಳಿಗೆ ಹೋಲಿಸಿದಾಗ ಪ್ರಸ್ತುತ ವರ್ಷದಲ್ಲಿ, ಮಾರಾಟ ಮಾಡಿದ ವಾಯು ವಿದ್ಯುಚ್ಛಕ್ತಿಯು 1036.24 ಲಕ್ಷ ರೂ.ಗಳಾಗಿತ್ತು. ಹಿಂದಿನ ವರ್ಷದಂತೆಯೇ ಪ್ರಸ್ತುತ ವರ್ಷದಲ್ಲಿ ಅದು ಪ್ರತಿ kwhಗೆ ರೂ.3.40 ಗಳಾಗಿತ್ತು.

7. ಕಳೆದ ವರ್ಷ 2012–13ರಲ್ಲಿನ ರೂ. 27,190 ಲಕ್ಷಗಳಿಗೆ ಹೋಲಿಸಿದಾಗ ಪ್ರಸ್ತುತ ವರ್ಷದಲ್ಲಿನ ನಿರ್ವಹಣಾ ಲಾಭವು (ಬಡ್ಡಿ, ಸವಕಳಿ ಮತ್ತು ತೆರಿಗೆಗೆ ಮುನ್ನ) 16,043 ಲಕ್ಷಗಳಾಗಿತ್ತು. ಇದು ಶೇ.41.00% ರಷ್ಟು ಇಳಿಕೆಯಾಗಿದೆ.

8. 2012–13 ರಲ್ಲಿನ 16,950 ಲಕ್ಷ ರೂ.ಗಳ ನಿವ್ವಳ ಲಾಭಕ್ಕೆ ಹೋಲಿಸಿದಾಗ ಪ್ರಸ್ತುತ ವರ್ಷದಲ್ಲಿ, ಅದು 8,961 ಲಕ್ಷ ರೂ. ಗಳಾಗಿದ್ದು ಶೇ. 47.13% ರಷ್ಟು ಇಳಿಕೆಯಾಗಿದೆ.

9. ಕಳೆದ ವರ್ಷಕ್ಕೆ ಹೋಲಿಸಿದಾಗ ಪ್ರಸ್ತುತ ವರ್ಷದಲ್ಲಿನ ಲಾಭದಲ್ಲಿ ಇಳಿಕೆ ಉಂಟಾಗಲು ಈ ಕೆಳಗಿನ ಅಂಶಗಳು ಪ್ರಮುಖ ಕಾರಣವಾಗಿವೆ.

(ಎ) ಚಿನ್ನದ ಸರಾಸರಿ ಬೆಲೆಯಲ್ಲಿ ಪ್ರತಿ ಗ್ರಾಂ.ಗೆ 192 ರೂ.ಗಳು ಇಳಿಕೆಯಾಗಿ ಅದು ಮೌಲ್ಯದಲ್ಲಿ 27.83 ಕೋಟಿ ರೂ.ಗಳಾಗಿದ್ದು, ಅದು ನೇರವಾಗಿ ಲಾಭದ ಮೇಲೆ ಪರಿಣಾಮ ಬೀರಿದೆ.

(ಬಿ) ಚಿನ್ನದ ಮಾರಾಟ ಪರಿಮಾಣವು 288 ಕೆ.ಜಿ.ಯಷ್ಟು ಕಡಿಮೆಯಾಗಿ ಅದರಿಂದ ಲಾಭವು 34.21 ಕೋಟಿ ರೂ.ಗಳಷ್ಟು ಕಡಿಮೆಯಾಗಿದೆ

(ಸಿ) ಚಿನ್ನದ ಉತ್ಪಾದನೆಯಲ್ಲಿ ಸ್ವಲ್ಪ ಇಳಿಕೆಯಾಗಿದ್ದಾಗ್ಯೂ, ಉತ್ಪಾದನಾ ವೆಚ್ಚದಲ್ಲಿ, ಪ್ರಮುಖವಾಗಿ ಸಾಮಗ್ರಿಗಳ ಬಳಕೆ, ನೌಕರರ ಸವಲತ್ತುಗಳ ವೆಚ್ಚದಲ್ಲಿ 17.73 ಕೋಟಿ ರೂ.ಗಳಷ್ಟು ಏರಿಕೆಯಾಗಿ ಅವು ಲಾಭದ ಮೇಲೆ ಪರಿಣಾಮ ಬೀರಿವೆ.

(ಡಿ) ಮೇಲ್ಕಂಡ (ಎ) ರಿಂದ (ಸಿ) ವರೆಗಿನ ಒಟ್ಟು 79.41 ಕೋಟಿ ರೂ.ಗಳಷ್ಟು ಪರಿಣಾಮವು ಲಾಭದ ಮೇಲೆ ಆಗಿದೆ. ಹಾಗಾದಿದ್ದಲ್ಲಿ ಪ್ರಸ್ತುತ ವರ್ಷದಲ್ಲಿನ ಲಾಭವು ಬಹುತೇಕ ಕಳೆದ ಸಾಲಿನಷ್ಟೇ ಆಗಿರುತ್ತಿತ್ತು.

ಲಾಭಾಂಶ :

ನಿಮ್ಮ ನಿರ್ದೇಶಕರುಗಳು, ಸಂದಾಯಿತ ಬಂಡವಾಳದ ಮೇಲೆ ಶೇ. 100ರಂತೆ, 296.20 ಲಕ್ಷ ರೂ. ಗಳ ಲಾಭಾಂಶವನ್ನು ವಾರ್ಷಿಕ ಸಭೆಯಲ್ಲಿ ಸದಸ್ಯರ ಅನುಮೋದನೆಗೊಳಪಟ್ಟು, ನೀಡಲು ಶಿಫಾರಸ್ಸು ಮಾಡಿರುತ್ತಾರೆ.

ಕ್ಲೇಮು ಮಾಡಿಲ್ಲದ ಲಾಭಾಂಶ :

1956ರ ಕಂಪನಿ ಕಾಯಿದೆ ಪ್ರಕಾರ, ಲಾಭಾಂಶವನ್ನು ಏಳು ವರ್ಷಗಳೊಳಗೆ ಪಡೆಯದಿದ್ದಲ್ಲಿ, ಕೇಂದ್ರ ಸರ್ಕಾರವು ಸ್ಥಾಪಿಸಿದ ಮತ್ತು ನಿರ್ವಹಿಸುತ್ತಿರುವ "ಹೂಡಿಕೆದಾರರ ಶಿಕ್ಷಣ ಮತ್ತು ಕಲ್ಯಾಣ ನಿಧಿಗೆ" ವರ್ಗಾಯಿಸಬೇಕಿರುತ್ತದೆ. 31ನೇ ಮಾರ್ಚ್ 2014ರಲ್ಲಿದ್ದಂತೆ ಕೋರಿಕೆ ಸಲ್ಲಿಸದ (ಕ್ಲೇಮು ಮಾಡಿಲ್ಲದ) ಲಾಭಾಂಶವು ರೂ. 8.46 ಲಕ್ಷ ರೂ.ಗಳಾಗಿರುತ್ತದೆ ಮತ್ತು ಅದನ್ನು ಕೇಂದ್ರ ಸರ್ಕಾರದ ಮೇಲ್ಕಂಡ ನಿಧಿಗೆ, ಅನ್ವಯವಾಗುವ ಆಯಾ ದಿನಾಂಕದಂದು ವರ್ಗಾಯಿಸಲಾಗುವುದು.

ನಿವ್ವಳ ಮೌಲ್ಯ :

ಕಳೆದ ವರ್ಷದ 94,147 ಲಕ್ಷ ರೂ.ಗಳಿಗೆ ಹೋಲಿಸಿದಾಗ, ನಿಮ್ಮ ಕಂಪನಿಯು ನಿವ್ವಳ ಮೌಲ್ಯವು 31ನೇ ಮಾರ್ಚ್ 2014ರ ಅಂತ್ಯದ ಪ್ರಸ್ತುತ ವರ್ಷದಲ್ಲಿ 1,02,762 ಲಕ್ಷ ರೂ.ಗಳಾಗಿತ್ತು. ಪ್ರಸ್ತುತ ವರ್ಷದ 8,961.06 ಲಕ್ಷ ರೂ.ಗಳ ನಿವ್ವಳ ಲಾಭದಲ್ಲಿ ಕ್ರಮವಾಗಿ ಲಾಭಾಂಶಕ್ಕಾಗಿ ಮತ್ತು ಸಾಮಾನ್ಯ ನಿಧಿಗೆ 296.20 ಮತ್ತು 1,450 ಲಕ್ಷ ರೂ.ಗಳನ್ನು ವಿನಿಯೋಗಿಸಲಾಗಿದೆ. ಪ್ರತಿ ಷೇರಿನ ಮೇಲೆ ಗಳಿಸಲಾದ ಆದಾಯವು ರೂ. 3,025 ಆಗಿದ್ದು, ಅದು ಕಳೆದ ವರ್ಷ 5,726 ಆಗಿತ್ತು.

ಆರ್ಥಿಕ ಸ್ಥಿತಿಗತಿ

ಕಳೆದ ಎರಡು ವರ್ಷಗಳಲ್ಲಿನ ಆರ್ಥಿಕ ಸ್ಥಿತಿಗತಿಯನ್ನು ಈ ಕೆಳಗಿನ ಪಟ್ಟಿಯಲ್ಲಿ ಸಾರಾಂಶಗೊಳಿಸಲಾಗಿದೆ.

(ಲಕ್ಷ ರೂಗಳಲ್ಲಿ)

ವಿವರಗಳು	**2013–14ರ ಆರ್ಥಿಕ ವರ್ಷ**	2012–13ರ ಆರ್ಥಿಕ ವರ್ಷ
ಸಂದಾಯಿತ ಬಂಡವಾಳ	**296.20**	296.20
ಮೀಸಲುಗಳು ಮತ್ತು ಹೆಚ್ಚಳ	**102465.76**	93851.23
ಚಾಲ್ತಿಯಲ್ಲಿರದ ಭಾದ್ಯತೆಗಳು ಮತ್ತು ಏರ್ಪಾಟುಗಳು	**4404.01**	4649.50
ಮುಂದೂಡಲಾದ ತೆರಿಗೆ ಭಾದ್ಯತೆಗಳು (ನಿವ್ವಳ)	**2844.58**	1844.79
ಚಾಲ್ತಿಯಲ್ಲಿರುವ ಭಾದ್ಯತೆಗಳು ಮತ್ತು ಏರ್ಪಾಡುಗಳು	**8072.31**	6659.71
ಒಟ್ಟು	**118082.86**	107301.43
ನಿವ್ವಳ ಸ್ಥಿರಾಸ್ತಿಗಳು	**23982.30**	21969.45
ಇತರೇ ಚಾಲ್ತಿಯಲ್ಲಿರದ ಆಸ್ತಿಗಳು	**952.36**	912.40
ಚಾಲ್ತಿಯಲ್ಲಿರುವ ಆಸ್ತಿಗಳು, ಸಾಲಗಳು ಮತ್ತು ಮುಂಗಡಗಳು	**93148.20**	84419.58
ಒಟ್ಟು	**118082.86**	**107301.43**

ನಿಶ್ಚಿತ ಠೇವಣಿಗಳು

ಕಂಪನಿ ಕಾಯಿದೆ 1956ರ ಸೆಕ್ಷನ್ 58ಎ ರ ವ್ಯಾಪ್ತಿಗೆ ಬರುವ ಯಾವುದೇ ಸಾರ್ವಜನಿಕ ಠೇವಣಿಗಳನ್ನೂ ನಿಮ್ಮ ಕಂಪನಿಯು ಸ್ವೀಕರಿಸಿಲ್ಲ.

ಭವಿಷ್ಯದ ಮುನ್ನೋಟ :

ಹಲವು ವರ್ಷಗಳಿಂದ ಭಾರತದ ಸಮೃದ್ಧ ಚಿನ್ನದ ಬಳಕೆಯೇ ಜಾಗತಿಕ ಮಾರುಕಟ್ಟೆಯಲ್ಲಿನ ಚಿನ್ನದ ಬೆಲೆಯಲ್ಲಿ ಗುರುತರ ಏರಿಕೆಗೆ ಆಧಾರಸ್ತಂಭವಾಗಿದೆ. ಆದರೆ 2013ನೇ ಸಾಲಿನ ಮಧ್ಯಭಾಗದಲ್ಲಿ ಭಾರತ ಸರ್ಕಾರವು ಚಿನ್ನದ ಆಮದಿನ ಮೇಲೆ ವಿಧಿಸಿದ ಶೇ.10ರ ಆಯಾತಕರ ಮತ್ತು ಆಯಾತದಾರರು 80:20ರ ಅನುಪಾತದಲ್ಲಿ ತಾವು ಆಮದು ಮಾಡಿಕೊಂಡ ಚಿನ್ನವನ್ನು ಮರುನಿರ್ಯಾತ ಮಾಡಬೇಕಾದ ಅವಶ್ಯಕತೆ ಮತ್ತು ಚಾಲ್ತಿ ಲೆಕ್ಕದ ಕೊರತೆಯನ್ನು ತಡೆಯುವ ಸಲುವಾಗಿ ತೆಗೆದುಕೊಂಡ ಪರಿಹಾರ ಕಾರ್ಯಗಳು ಚಿನ್ನದ ಬೆಲೆಯ ಮೇಲೆ ಪರಿಣಾಮ ಬೀರಿದವು. ಸರ್ಕಾರದ ನೀತಿಗಳಿಂದಾಗಿ ಪ್ರತಿ ಗ್ರಾಂ.ಗೆ 3300 ರೂ.ಗಳಷ್ಟಿದ್ದ ಚಿನ್ನದ ಬೆಲೆಯು ಈಗ 2,800ರೂ. ಗಳಾಗಿದೆ. ಹೊಸ ಸರ್ಕಾರವು ಚಿನ್ನದ ಆಮದಿನ ಮೇಲಿನ ತೆರಿಗೆಯನ್ನು ಕಡಿಮೆಗೊಳಿಸಿದ ಬಗೆಗೆ ಭಾರತದಲ್ಲಿ ಮತ್ತು ಜಾಗತಿಕ ಮಟ್ಟದಲ್ಲಿ ಚಿನ್ನದ ಬೆಲೆಯ ಮೇಲೆ ಪರಿಣಾಮ ಬೀರುವುದೆಂಬ ನಿರೀಕ್ಷೆಯು ಬಹಳಷ್ಟಿವೆ. ಇದರ ಪರಿಣಾಮವಾಗಿ 2012ರಲ್ಲಿ ಭಾರತವು ಜಗತ್ತಿನ ಅತಿದೊಡ್ಡ ಆಮದುದಾರ ದೇಶವಾಗಿದ್ದು, ಈಗ ಅದು ಚೀನಾ ದೇಶದ ನಂತರ ಎರಡನೆ ಸ್ಥಾನದಲ್ಲಿದೆ. ಭಾರತದಲ್ಲಿ ಚಿನ್ನದ ಉತ್ಪಾದನೆಯು ಜಗತ್ತಿನ ಒಟ್ಟು ಉತ್ಪಾದನೆಯಾದ 2700 ಮೆಟ್ರಿಕ್ ಟನ್ನುಗಳಲ್ಲಿ ಶೇ.1/2 ರಷ್ಟಿತ್ತು. ಹಟ್ಟಿ ಚಿನ್ನದ ಗಣಿಯು ಭಾರತದ ಏಕಮಾತ್ರ ಅತಿದೊಡ್ಡ ಚಿನ್ನದ ಉತ್ಪಾದನಾ ಕಂಪನಿಯಾಗಿದೆ. ಇಳಿದ ಹಣದುಬ್ಬರ ಮತ್ತು ಜಿಡಿಪಿಯಲ್ಲಿನ ಬೆಳವಣಿಗೆಯಿಂದಾಗಿ ಚಿನ್ನದ ಮೇಲಿನ ಬೇಡಿಕೆಯು ಹೆಚ್ಚಲಿದೆ ಎಂದು ನಿರೀಕ್ಷಿಸಲಾಗಿದೆ

ಹೊಸ ಯೋಜನೆಗಳು :

1. ಕಾರ್ಯಗತಗೊಳಿಸಲಾಗುತ್ತಿರುವುದು

a) ಹೊಸ ವರ್ತುಲ ಶಾಫ್ಟ್ :

ವಿವಿಧ ಸಂಸ್ಥೆಗಳ ಒಕ್ಕೂಟದಿಂದ ಟರ್ನ್ ಕೀ ಆಧಾರದ ಮೇಲೆ ಹಟ್ಟಿಯಲ್ಲಿ ಹೊಸ ವರ್ತುಲ ಶಾಫ್ಟನ್ನು ನಿರ್ಮಿಸಲಾಗುತ್ತಿದೆ. 2013–14ನೇ ಸಾಲಿನಲ್ಲಿ 33 ಮೀ. ಶಾಫ್ಟನ್ನು ಇಳಿಸಲಾಗಿದೆ ಮತ್ತು 28 ಮೀ. ಶಾಫ್ಟ್ ಲೈನಿಂಗ್ ಅನ್ನು ವಿವಿಧ ಸಂಸ್ಥೆಗಳ ಒಕ್ಕೂಟದಿಂದ ಸಾಧಿಸಲಾಗಿದೆ. ಈ ಒಕ್ಕೂಟವು ಅತಿವೇಗದ ಶಾಫ್ಟ್ ಸಿಂಕಿಂಗ್ ಯಂತ್ರವನ್ನು ಪಡೆದಿದ್ದು ಅದರ ಸ್ಥಾಪನಾ ಕಾರ್ಯಗಳು ಮುಂದುವರೆಯುತ್ತಿವೆ.

2. ಉದ್ದೇಶಿತ ಇತರೇ ಯೋಜನೆಗಳು

ಎ) ಹಟ್ಟಿಯ ದಕ್ಷಿಣ ಭಾಗದಲ್ಲಿ ಮತ್ತು ಮುಖ್ಯ ರೀಫ್‌ನಲ್ಲಿ ಹೆಚ್ಚಿನ ಅದಿರು ಇರುವಿಕೆಯನ್ನು ಖಚಿತಪಡಿಸಲೋಸುಗ ಗಣಿ ನಿರ್ಮಾಣ ಮತ್ತು ಅನ್ವೇಷಣಾ ಗಣಿ ಅಭಿವೃದ್ಧಿಪಡಿಸುವಿಕೆ.

ಬಿ) ಹಟ್ಟಿಯಲ್ಲಿ ಭೂ ಕೆಳಮೈ ಪ್ರದೇಶದಲ್ಲಿ ಎರಡು ಹಿಂದಿರುಗುವ ಹವಾಮಾರ್ಗದಲ್ಲಿನ ಶಾಫ್ಟ್‌ಗಳ ನಿರ್ಮಾಣ.

ಸಿ) ವರ್ತುಲ ಶಾಫ್ಟ್‌ನೊಂದಿಗೆ ಉತ್ಪಾದಿಸಲಾಗುವ ಹಟ್ಟಿಯಲ್ಲಿನ ಹೆಚ್ಚುವರಿ ಅದಿರನ್ನು ಸಂಸ್ಕರಿಸಲು 50 ಟಿಪಿಹೆಚ್ ಬಾಲ್ ಮಿಲ್ಲಿನ ಸ್ಥಾಪನೆ.

ಡಿ) ಹಟ್ಟಿಯಲ್ಲಿ ವಿದ್ಯುತ್ತಿನ ಆಂತರಿಕ ಬಳಕೆಗಾಗಿ 14MW ಸಾಮರ್ಥ್ಯದ ಸೌರಫೋಟೋ ವೋಲ್ಟೇಕ್ ಸ್ಥಾವರದ ಸ್ಥಾಪನೆ.

ಇ) ಮುಖ್ಯ ರೀಫನ್ನು ಮರು ಪಡೆಯಲೋಸುಗ 7, 10, 15 ಮತ್ತು 18ನೇ ಮಟ್ಟದಲ್ಲಿ ಸಮತಲ ಅಭಿವೃದ್ಧಿ.

ಎಫ್) ಅಂತರ್ಜಲ ಇಂಗಿಕೊಳ್ಳಬಹುದಾದ ಖನಿಜಗಳನ್ನು ತಡೆಯಲೋಸುಗ ಹೊಸ ಅಭೇದ್ಯ ಟೈಲಿಂಗ್ ಡಂಪ್‌ಗಳ ನಿರ್ಮಾಣ.

ಜಿ) ಗಣಿ ಗುತ್ತಿಗೆ/ಅನ್ವೇಷಣೆಗಾಗಿ ಪರವಾನಗಿ ಪ್ರದೇಶಗಳಲ್ಲಿ ಹೆಚ್ಚಿನ ಅದಿರು ನಿಕಾಯಗಳನ್ನು ಖಚಿತಪಡಿಸಲೋಸುಗ ಮೇಲ್ಮೈ ಡೈಮಂಡ್ ಡ್ರಿಲ್ಲಿಂಗ್ ಮಾಡುವುದು

ಹೆಚ್) ಗೋಚರಿಸಲಾಗದ ಅದಿರು ಚಿಗುರುಗಳನ್ನು ಮತ್ತು ಸಮಾನಾಂತರ ರೀಫ್‌ಗಳನ್ನು ಗುರುತಿಸಲೋಸುಗ ಭೂಒಳಮೈ ಡೈಮಂಡ್ ಡ್ರಿಲ್ಲಿಂಗ್ ಮಾಡುವುದು.

ಐ) ಹೆಚ್ಚಿನ ಅದಿರನ್ನು ಅರೆಯಲೋಸುಗ 150 TPH ಫೀಡರ್ ಒಳಗೊಂಡ ಕ್ರಷರ್‌ನ ಸ್ಥಾಪನೆ.

ಜೆ) ಕಾರ್ಮಿಕರಿಗಾಗಿ 80 ವಸತಿ ಗೃಹಗಳ ನಿರ್ಮಾಣ.

ಕೆ) ಕೇಂದ್ರಿಯ ವಿದ್ಯಾಲಯವನ್ನು ಹೆಚ್ಚಿನ ವಿದ್ಯಾಭ್ಯಾಸದ ಸೌಕರ್ಯಕ್ಕಾಗಿ ಉನ್ನತೀಕರಿಸುವುದು.

ಎಲ್) ಅತಿಕ್ರಮಣ ಪ್ರವೇಶವನ್ನು ತಡೆಯಲೋಸುಗ ಪರಿಧಿ ಗೋಡೆ ಮತ್ತು ಬೇಲಿಗಳ ನಿರ್ಮಾಣ.

ಗಣಿ ಕಾರ್ಯಾಚರಣೆಗಳು :

ಹಟ್ಟಿ ಚಿನ್ನದ ಗಣಿ

i. **ಉತ್ಪಾದನೆ**

a. MR20–18 GE 51 B-Block ಮತ್ತು MR 19–17 EE 46-48 ಎಂಬ ಎರಡು ಸ್ಟೋಪ್ ಬ್ಲಾಕ್‌ಗಳಲ್ಲಿ ಉತ್ಪಾದನೆಯನ್ನು ಪೂರ್ಣಗೊಳಿಸಲಾಯಿತು.

b. ನಾಲ್ಕು LDBH ಸ್ಟೋಪ್‌ಗಳಾದ SR 17–15 IE 37 (RP-5) SR 11–8 HE 33–34 A-Block, OR 20-19 BE 41(3P), VR 8-6 FE 32-33ಗಳನ್ನು ಉತ್ಪಾದನೆಗೆ ಒಳಪಡಿಸಲಾಯಿತು. ಪ್ರಸ್ತುತ 10ನೇ ಸಬ್–ಲೆವೆಲ್/LDBH ಸ್ಟೋಪ್‌ಗಳು ಹಟ್ಟಿಯಲ್ಲಿ ಕಾರ್ಯ ನಿರ್ವಹಿಸುತ್ತಿವೆ.

c. ಸ್ಟೋಪಿಂಗ್‌ಗಾಗಿ ಹತ್ತು ಸ್ಟೋಪ್‌ಗಳನ್ನು ತಯಾರಿಸಲಾಗುತ್ತಿದೆ.

ii **ವಾತಾಯನ ವ್ಯವಸ್ಥೆ :**

ಹಟ್ಟಿ ಚಿನ್ನದ ಗಣಿಯಲ್ಲಿ ಫೀಲ್ಡ್ ಇನ್‌ವೆಸ್ಟಿಗೇಷನ್ ಮತ್ತು ವೆಂಟಿಲೇಷನ್ ಪ್ಲಾನಿಂಗ್ ಯೋಜನೆಯ ಸಂಬಂಧ ಪೂರ್ವಭಾವಿ ವರದಿಯನ್ನು ಇಂಡಿಯನ್ ಸ್ಕೂಲ್ ಆಫ್ ಮೈನ್, ಧನಬಾದ್‌ರವರ ಪ್ರೊ. ಡಿ.ಸಿ. ಪಾಣಿಗ್ರಾಹಿಯವರಿಗೆ ಸಲ್ಲಿಸಲಾಗಿದೆ. ವಾತಾಯನ ವ್ಯವಸ್ಥೆಯನ್ನು ಸುಧಾರಿಸಲೋಸುಗ ಹಿಂದಿರುಗುವ ಹವಾಮಾರ್ಗ ಶಾಫ್ಟನ್ನು 9.8 ಕೋಟಿ ರೂ.ಗಳ ವೆಚ್ಚದಲ್ಲಿ ನಿರ್ಮಿಸಲು ಕೈಗೆತ್ತಿಕೊಳ್ಳಲಾಗುವುದು. ಮತ್ತು ಹಟ್ಟಿಯಲ್ಲಿ ವಿವಿಧ ಹಂತಗಳಲ್ಲಿನ ಕ್ರಾಸ್‌ಕಟ್‌ಗಳಲ್ಲಿ ವಾತಾಯನ ವ್ಯವಸ್ಥೆಯನ್ನು ನಿರ್ಮಿಸಲು ಉದ್ದೇಶಿಸಲಾಗಿದೆ.

iii **ಶಿಲಾ ಚಲನಶೀಲತೆ :**

ವಿಭಾಗೀಯವಾಗಿಯೇ ಉತ್ಪಾದನಾ ಸ್ಟೋಪ್‌ಗಳ ಇನ್ಸುಟ್ರುಮೆಂಟೇಶನ್, ಮಾನೀಟರಿಂಗ್ ಮತ್ತು ಡಾಟಾ ಇಂಟರ್‌ಪ್ರಿಟೇಶನ್ ಕಾರ್ಯಗಳನ್ನು ಮಾಡಲಾಗಿದೆ. ಶಿಲಾ ಚಲನಶೀಲತೆಯಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿ ಅಧ್ಯಯನಗಳನ್ನು ಒಂದು ವೈಜ್ಞಾನಿಕ ಸಂಸ್ಥೆಯಿಂದ ಮಾಡಿಸಲು ಉದ್ದೇಶಿಸಲಾಗಿದೆ. ಹಟ್ಟಿಯಲ್ಲಿನ ಎರಡನೆ ಹಂತದ ಗಣಿ ಕಾರ್ಯಾಚರಣೆಗಾಗಿ ಅತ್ಯುತ್ತಮ ಸ್ಟೋಪಿಂಗ್ ಮಾನದಂಡಗಳ ವಿನ್ಯಾಸಗಳನ್ನು ಮಾಡುವುದೇ ಈ ಅಧ್ಯಯನದ ಉದ್ದೇಶವಾಗಿದೆ

iV **ಒಪ್ಪವಾಗಿ ಮರಳಿನ ಜೋಡಣೆ (ಸ್ಯಾಂಡ್ ಸ್ಟೋಯಿಂಗ್) :**

a. 2013–14ರಲ್ಲಿ ಒಟ್ಟು 92860 ಟನ್ ಮರಳನ್ನು ಸ್ಟೋಯಿಂಗ್ ಮಾಡಲಾಗಿದೆ.

b. ZI 18–17L CE29–30 ಸ್ಟೋಪಗಳನ್ನು ತುಂಬುವ ಕಾರ್ಯಗಳು ಪೂರ್ಣಗೊಂಡಿವೆ.

c. OR 18-17L DE45-48 ಸ್ಟೋಪಗಳನ್ನು ತುಂಬುವ ಕಾರ್ಯಗಳು ಪೂರ್ಣಗೊಂಡಿವೆ.

d. SRF 13 Inter 10L JE 34 ಮತ್ತು MR 16-14, GE49-50 ಸ್ಟೋಪುಗಳನ್ನು ತುಂಬುವ ಕಾರ್ಯವು ಪ್ರಗತಿಯಲ್ಲಿವೆ.

e. OR 19–16L AE39 ಸ್ಟೋಪನ್ನು ಸ್ಟೋಯಿಂಗ್‌ಗಾಗಿ ತಯಾರಿಸಲಾಗಿದೆ.

f. MR 20–18 S/L GE51(B-Block) ಸ್ಟೋಪ್ ತುಂಬುವಿಕೆಗಾಗಿ ತಯಾರಿಕಾ ಹಂತದಲ್ಲಿದೆ.

V **ಭೂ ಕೆಳಮೈ ವಿದ್ಯುಚ್ಛಕ್ತಿ ಸರಬರಾಜು :**

ಭೂ ಮೇಲ್ಮೈನಿಂದ 20ನೇ ಹಂತದವರೆಗೆ 8" ವ್ಯಾಸದ ರಂಧ್ರಗಳನ್ನು ಕೊರೆಯುವ ಕಾರ್ಯವು ಪ್ರಗತಿಯಲ್ಲಿದೆ. ಈ ರಂಧ್ರಗಳನ್ನು ಕೊರೆಯುವ ಉದ್ದೇಶವು ಭೂಮೇಲ್ಮೈನಿಂದ ಭೂಒಳಮೈಗೆ ವಿದ್ಯುತ್ ವಿತರಣೆ ಮಾಡುವುದೇ ಆಗಿದೆ.

ಉಟಿ ಚಿನ್ನದ ಗಣಿ

1. ಭೂ ಕೆಳಮೈ (ಲೋಡ್ ಸಂ. 3)

ಒಂದನೇ ಹಂತದಿಂದ 3ನೇ ಹಂತದವರೆಗೆ ಒಂದು ಸ್ಟೋಪ್ ಬ್ಲಾಕನ್ನು ತಯಾರಿಸಲಾಗಿದೆ ಮತ್ತು ಉತ್ಪಾದನಾ ಡ್ರಿಲ್ಲಿಂಗ್ ಪ್ರಗತಿಯಲ್ಲಿದೆ. ಈ ಮಧ್ಯೆ ಸ್ಟೋಪಿಂಗ್ ಕಾರ್ಯಾಚರಣೆಗಳಿಗಾಗಿ ಗಣಿ ಸುರಕ್ಷಣಾ ಮಹಾನಿರ್ದೇಶಕರಿಗೆ ಅರ್ಜಿಯನ್ನು ಸಲ್ಲಿಸಲಾಗಿದೆ.

2. ಭೂ ಕೆಳಮೈ (ಲೋಡ್ ಸಂ. 4)

MECL ನ ದಕ್ಷಿಣ ಶಾಫ್ಟನ್ನು ಆಳಗೊಳಿಸುವ ಮತ್ತು ಭೂಕೆಳಮೈ ಗಣಿಯನ್ನು ಅಭಿವೃದ್ಧಿ ಪಡಿಸುವ ಕಾರ್ಯಗಳು ಒಂದು ಬಾಹ್ಯ ಸಂಸ್ಥೆಯ ಮೂಲಕ ಪ್ರಗತಿಯಲ್ಲಿವೆ.

ಹೀರಾ ಬುದ್ದಿನಿ ಚಿನ್ನದ ಗಣಿ :

ಒಂದನೇ ಹಂತದಿಂದ ಮೂರನೇ ಹಂತದವರೆಗಿನ ಎಸ್–3 ಉಪಹಂತದಲ್ಲಿನ ಸ್ಟೋಪಿಂಗ್ ಕಾರ್ಯಗಳು ಮುಕ್ತಾಯಗೊಂಡಿವೆ. ಪ್ರಸ್ತುತ ಎಸ್–4 ಬ್ಲಾಕ್ ಉತ್ಪಾದನಾ ನಿರತವಾಗಿದೆ. ಎಸ್–5 ಬ್ಲಾಕ್‌ನಲ್ಲಿ ಲಾಂಗ್ ಹೋಲ್ ಡ್ರಿಲ್ಲಿಂಗ್ ಮತ್ತು ಹಾಲೇಜ್ ಅಭಿವೃದ್ಧಿ ಕಾರ್ಯಗಳು ಪ್ರಗತಿಯಲ್ಲಿವೆ. ಹೊಸ ಸರ್ವಿಸ್ ಶಾಫ್ಟ್‌ನ ನಿರ್ಮಾಣ ಕಾರ್ಯಗಳನ್ನು ಸದ್ಯದಲ್ಲೇ ಕೈಗೆತ್ತಿಕೊಳ್ಳಲಾಗುವುದು.

ಅನ್ವೇಷಣಾ ಕಾರ್ಯಚಟುವಟಿಕೆಗಳು :

ಗಣಿಗಳ ನಕ್ಷೆ ತಯಾರಿಕೆ, ಸುರಂಗ ತೋಡುವಿಕೆ, ಡೈಮಂಡ್ ಡ್ರಿಲ್ಲಿಂಗ್ (ಭೂ ಮೇಲ್ಮೈ ಮತ್ತು ಒಳಮೈ), ಜಿಯಾಕೆಮಿಕಲ್/ಜಿಯೋಫಿಸಿಕಲ್ ಮುನ್ನೋಟಗಳ ಕಾರ್ಯಗಳನ್ನು ಆರ್‌ಪಿ/ವಿಎಲ್/ಎಂಎಲ್ ಪ್ರದೇಶಗಳಲ್ಲಿ ಗಣಿಗಾರಿಕೆಗಾಗಿ ಸಾಧ್ಯತಾ ಅಧ್ಯಯನಗಳು/ ಸಂಭವನೀಯ ಭಾವಿಗಣಿಗಾರಿಕೆಗಳಿಗಾಗಿ ಕ್ರಮಬದ್ಧವಾಗಿ, ಅನ್ವೇಷಣಾ ವಿಭಾಗವು ಮಾಡುತ್ತದೆ. ಉತ್ಪಾದನಾ ನಿರ್ವಹಣೆ, ಗುಣಮಟ್ಟ ಪರೀಕ್ಷೆ, ಉತ್ಪಾದಕತೆಯ ನಿರ್ವಹಣೆಯೇ ಅಲ್ಲದೇ ಭೂಗರ್ಭ ಅನ್ವೇಷಣಾ ಕಾರ್ಯಗಳಾದ ಗಣಿ ಅಭಿವೃದ್ಧಿ, ಪ್ರಾಥಮಿಕ/ಮಾಧ್ಯಮಿಕ ಅಭಿವೃದ್ಧಿಗಳು, ಮಾದರಿ ಪರೀಕ್ಷೆ, ಸ್ಟೋಪ್‌ಗಳಲ್ಲಿ ಗುಣಮಟ್ಟದ ಪರೀಕ್ಷೆಗಳು, ಅಭಿವೃದ್ಧಿಗಳು ಮತ್ತು ಗಣಿ ಯೋಜನೆಗಳಿಗೆ ಅದಿರು ನಿಕ್ಷೇಪ ಅಂದಾಜುಗಳು ಮತ್ತು ಇತರೆ ಕಾನೂನು ವರದಿಗಳ ತಯಾರಿಕೆ ಮುಂತಾದವುಗಳನ್ನು ಅನ್ವೇಷಣಾ ವಿಭಾಗವು ನಿರ್ವಹಿಸುತ್ತದೆ.

ಭೂವಿಜ್ಞಾನ ಕಾರ್ಯಾಗಳು :

ಗಣಿ	ಭೂಗರ್ಭ ನಕ್ಷೆ ತಯಾರಿಕೆ (ಮೀಟರ್‌ಗಳಲ್ಲಿ)	ಮಾದರಿಗಳ ಸಂಗ್ರಹ (ಸಂಖ್ಯೆಗಳಲ್ಲಿ)
ಹಟ್ಟಿ ಚಿನ್ನದ ಗಣಿ	1892.00	11787
ಊಟಿ ಚಿನ್ನದ ಗಣಿ	600.40	1885
ಹೀರಾಬುದ್ದಿನಿ ಚಿನ್ನದ ಗಣಿ	331.10	1484
ಒಟ್ಟು	**2823.50**	**15156**

ಡೈಮಂಡ್ ಡ್ರಿಲ್ಲಿಂಗ್ (ಮೀಟರುಗಳಲ್ಲಿ)

	ಒಟ್ಟು
ಎ) ಹಟ್ಟಿ ಚಿನ್ನದ ಗಣಿ (ಭೂ ಒಳಮೈ ಡೈಮಂಡ್ ಡ್ರಿಲ್ಲಿಂಗ್)	920.50
ಬಿ) ಹಟ್ಟಿ ಚಿನ್ನದ ಗಣಿ (ಭೂ ಮೇಲ್ಮೈ ಡೈಮಂಡ್ ಡ್ರಿಲ್ಲಿಂಗ್)	2821.80
ಸಿ) ಹೀರಾಬುದ್ದಿನಿ ಚಿನ್ನದ ಗಣಿ (ಭೂ ಮೇಲ್ಮೈ ಡೈಮಂಡ್ ಡ್ರಿಲ್ಲಿಂಗ್)	2323.80

ಗಣಿ ಯೋಜನೆಗಳು (ಪಿಎಂಸಿಪಿ ಯನ್ನು ಒಳಗೊಂಡು) ಡಿಜಿಸಿಪಿ ಸರ್ವೇಕ್ಷಣೆ ಮತ್ತು ಪರಿಸರ ಅನುಮತಿ.

ಹಟ್ಟಿ, ವಂಡಲಿ, ಮಂಗ್ಲೂರು ಮತ್ತು ಅಜ್ಜನಹಳ್ಳಿ ಚಿನ್ನದ ಗಣಿಗಳಲ್ಲಿನ ಗಣಿಯೋಜನೆಗಳಿಗೆ (ಪಿಎಂಸಿಪಿ ಒಳಗೊಂಡು) ಐಬಿಎಂ ನವರು ಒಪ್ಪಿಗೆ ಕೊಟ್ಟಿರುತ್ತಾರೆ. ಡಿಜಿಪಿಎಸ್ ಕಾರ್ಯಗಳು ಪೂರ್ಣಗೊಂಡಿವೆ ಮತ್ತು ಡಿಎಂಜಿ ರವರಿಗೆ ಸಲ್ಲಿಸಲಾಗಿದೆ. ಇಂಗಳದಾಳ್ ತಾಮ್ರ ಗಣಿಯಲ್ಲಿನ (ಸೆಂಟ್ರಲ್ ಬ್ಲಾಕ್) ಗಣಿ ಯೋಜನೆಗಳಿಗೆ (ಪಿಎಂಸಿಪಿ ಒಳಗೊಂಡು) ಐಬಿಎಂ ನವರು ಒಪ್ಪಿಗೆ ಕೊಟ್ಟಿರುತ್ತಾರೆ.

ಡಿಜಿಪಿಎಸ್ ಕಾರ್ಯಗಳು ಪೂರ್ನಗೊಂಡಿವೆ ಮತ್ತು ಡಿಎಂಜಿರವರಿಗೆ ಸಲ್ಲಿಸಲಾಗಿದೆ. EIA ಮತ್ತು EMP ಅಧ್ಯಯನಗಳಿಗಾಗಿ ಕೋರ್ ಮತ್ತು ಬಫರ್ ಪ್ರದೇಶಗಳಲ್ಲಿನ ಆಧಾರ ಪೂರ್ವ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. ದಾಖಲೆಗಳನ್ನು SEAC, MOEF ರವರಿಗೆ TOR, EIZ ಗಾಗಿ ಸಲ್ಲಿಸಲಾಗಿದೆ ಮತ್ತು EMP ಕಾರ್ಯಗಳು ಪ್ರಗತಿಯಲ್ಲಿವೆ.

ಇಂಗಳ್‌ದಾಳ್(ನಾರ್ತ್ ಬ್ಲಾಕ್)ನ ಗಣಿ ಯೋಜನೆಗಳನ್ನು ಐಬಿಎಂರವರಿಗೆ ಸಲ್ಲಿಸಲಾಗಿ ಅವರು ಪ್ರದೇಶವನ್ನು ತಪಾಸಣೆ ಮಾಡಿದ್ದಾರೆ. EIA ಮತ್ತು EMP ಅಧ್ಯಯನಗಳಿಗಾಗಿ ಕೋರ್ ಮತ್ತು ಬಫರ್ ಪ್ರದೇಶವನ್ನು ಆಧಾರ ಪೂರ್ವ ಮಾಹಿತಿಗಳನ್ನು ತಯಾರಿಸಲಾಗಿ ಅವನ್ನು SEAC, MOEF ರವರಿಗೆ TOR, ಗಾಗಿ ಸಲ್ಲಿಸಲಾಗಿದೆ ಮತ್ತು EMP ಕಾರ್ಯಗಳು ಪ್ರಗತಿಯಲ್ಲಿವೆ. DGPS ಮಾಹಿತಿಗಳನ್ನು NRSA ಹೈದರಾಬಾದ್‌ಗೆ ಉಪಗ್ರಹ ಮಾಹಿತಿಗಳನ್ನು ಪಡೆಯಲೋಸುಗ ಸಲ್ಲಿಸಲಾಗಿದೆ.

ಗಣಿ ಗುತ್ತಿಗೆಗಳ ನವೀಕರಣ :

ಊಟಿ, ವಂದಲಿ, ಮಂಗ್ಲೂರುನಲ್ಲಿ ಚಿನ್ನದ ಗಣಿ ಗುತ್ತಿಗೆಗಾಗಿ, ಇಂಗಳ್‌ದಾಳ್ ಗಣಿಯಲ್ಲಿ (ಸಂಟ್ರಲ್ ಮತ್ತು ನಾರ್ತ್ ಬ್ಲಾಕ್‌ಗಳಿಗೆ) ಅವಶ್ಯಕವಿರುವ ನಿರಪೇಕ್ಷಣಾ ಪತ್ರಗಳು, ಗಣಿ ಯೋಜನೆಗಳು, ಗ್ರಾಮ ನಕ್ಷೆಗಳು ಮತ್ತು ಆರ್‌ಟಿಸಿ ಮುಂತಾದವುಗಳನ್ನು ಡಿಎಂಜಿ ಬೆಂಗಳೂರುರವರಿಗೆ ಸಲ್ಲಿಸಲಾಗಿದೆ. ಸರ್ಕಾರದ ಅನುಮತಿಯನ್ನು ನಿರೀಕ್ಷಿಸಲಾಗಿದೆ.

ಪರಿವೀಕ್ಷಣಾ ಪರವಾನಗಿ

ಗಣಿಗಾರಿಕೆಗಳಿಗಾಗಿ ಚಿತ್ರದುರ್ಗ, ತುಮಕೂರು, ಹಾವೇರಿ ಮತ್ತು ದಾವಣಗೆರೆ ಜಿಲ್ಲೆಯ ಏಳು ಬ್ಲಾಕ್‌ಗಳಲ್ಲಿ ಭೂಗರ್ಭ ನಕ್ಷೀಕರಣ, ಟ್ರೆಂಚಿಂಗ್, ಜಿಯೊಫಿಸಿಕಲ್, ಜಿಯೊಕೆಮಿಕಲ್ ಸರ್ವೆ, ಡೈಮಂಡ್ ಡ್ರಿಲ್ಲಿಂಗ್ ನಂತರದ ಮುಂದುವರೆದ ಪರಿಶೋಧನೆಯನ್ನು ಪರಿವೀಕ್ಷಣಾ ಪರವಾನಗಿಯನ್ನು ಪಡೆದ ನಂತರ ಮಾಡಬೇಕಿದೆ. ಪರಿವೀಕ್ಷಣಾ ಪರವಾನಗಿ ಕಡತಗಳನ್ನು ವಿವಿಧ ಹಂತಗಳಲ್ಲಿ ಸಂಸ್ಕರಿಸಿದ ನಂತರ ಕರ್ನಾಟಕ ಸರ್ಕಾರದಿಂದ ಅವನ್ನು ಭಾರತ ಸರ್ಕಾರದ ಗಣಿಗಳ ಮಂತ್ರಾಲಯಕ್ಕೆ ಕಳುಹಿಸಲಾಗಿ ಅನುಮತಿಯನ್ನು ನಿರೀಕ್ಷಿಸಲಾಗಿದೆ. ಹಟ್ಟಿ ಚಿನ್ನದ ಗಣಿ ಕಂಪನಿಯ ಹಟ್ಟಿ–ಮಸ್ಕಿ ಪ್ರದೇಶದಲ್ಲಿನ 14 ಪರಿವೀಕ್ಷಣಾ ಪರವಾನಗಿಯ ಬ್ಲಾಕ್‌ಗಳ ಬಗೆಗಿನ ವ್ಯಾಜ್ಯವು (HGML v/s Geo Mysore) ಸರ್ವೋಚ್ಛನ್ಯಾಯಾಲಯದಲ್ಲಿದೆ.

ಚಿತ್ರದುರ್ಗ ಚಿನ್ನದ ಘಟಕ :

ತುಮಕೂರು ಜಿಲ್ಲೆಯ ಅಜ್ಜನಹಳ್ಳಿಯಲ್ಲಿ ಗಣಿ ಕಾರ್ಯಾಚರಣೆಗಾಗಿ ಸರ್ಕಾರವು ಕಂಪನಿಗೆ 38 ಹೆಕ್ಟೇರ್ ಪ್ರದೇಶವನ್ನು ಗುತ್ತಿಗೆ ನೀಡಿತ್ತು. 1995ರಲ್ಲಿ ಗಣಿ ಕಾರ್ಯಾಚರಣೆಯನ್ನು ಕಂಪನಿಯು ಪ್ರಾರಂಭಿಸಿದರೂ, ಗಣಿ ಕಾರ್ಯಾಚರಣೆಗಳು ಲಾಭದಾಯಕವಾಗಿಲ್ಲದುದರಿಂದ ಮತ್ತು ಆಕ್ಸಿಡೈಸ್ ಆಗಿಲ್ಲದ ಚಿನ್ನ ಅದುರಿನಿಂದಾಗಿ ಅದನ್ನು 2002ರಲ್ಲಿ ಸ್ಥಗಿತಗೊಳಿಸಲಾಯಿತು. ಆದಾಗ್ಯೂ ಈಗ ಅಲ್ಲಿ ಇರುವ 2,64,000 ಟನ್ ಅದಿರನ್ನು ಸಂಸ್ಕರಿಸಿದ ನಂತರ ಅದು ಲಾಭದಾಯಕವೆಂದು ಕಂಡುಬಂದರೆ ಗಣಿ ಕಾರ್ಯಾಚರಣೆಯನ್ನು ಪುನಶ್ಚೇತನಗೊಳಿಸಲು ನಿರ್ಧರಿಸಲಾಗಿದೆ. ಈ ಬಗ್ಗೆ ಸರ್ಕಾರದ ಅನುಮತಿಯನ್ನು ಕೋರಲಾಗಿ ಅದನ್ನು ನಿರೀಕ್ಷಿಸಲಾಗಿದೆ.

ಗಾಳಿ ಯಂತ್ರ ನಿರ್ವಹಣೆ

ನಮ್ಮ ಕಂಪನಿಯು ಚಿತ್ರದುರ್ಗ ಜಿಲ್ಲೆಯಲ್ಲಿನ ಇಂಗಳದಾಳದಲ್ಲಿ 11.4 ಮೆ.ವ್ಯಾ ಸಾಮರ್ಥ್ಯದ ಗಾಳಿ ಯಂತ್ರ ವಿದ್ಯುತ್ ಯೋಜನೆಯನ್ನು ಸ್ಥಾಪಿಸಿದೆ. ಮತ್ತು ಇದು 3,04,77,528 ಯೂನಿಟ್ಟುಗಳನ್ನು ಗಾಳಿ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಿ 2013–14ನೇ ಸಾಲಿನಲ್ಲಿ 10.36 ಕೋಟಿ ರೂ.ಗಳ ವರಮಾನವನ್ನು ಆರ್ಜಿಸಿದೆ.

ಪರಿಸರ ಸಂಬಂಧಿತ ವಿಷಯಗಳು :

ದಿ ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತವು (ಹೆಚ್‌ಜಿಎಂಎಲ್) ಒಂದು ಕಾರ್ಪೊರೇಟ್ ಸಂಸ್ಥೆಯಾಗಿದ್ದು, ಪರಿಸರದ ಬಗೆಗೆ ಜಾಗೃತವಾಗಿದೆ ಮತ್ತು ನಿರಂತರ ಬೆಳವಣಿಗೆ/ಅಭಿವೃದ್ಧಿಯ ಮೂಲಕ ತನ್ನ ವ್ಯಾವಹಾರಿಕ ಗುರಿಗಳನ್ನು ಸಾಧಿಸಲು ಕಟಿಬದ್ಧವಾಗಿದೆ. ಹಟ್ಟಿ ಚಿನ್ನದ ಗಣಿ ಕಂಪನಿಯು ಸಾಮಗ್ರಿಗಳ ಬಳಕೆ/ಮರುಬಳಕೆ ಮತ್ತು ಉಪಉತ್ಪನ್ನಗಳ ಉತ್ಪಾದನೆಯಲ್ಲಿ ಸಂಸ್ಕರಣಾ ತಾಂತ್ರಿಕತೆಯನ್ನು ಸುಧಾರಿಸಿಕೊಂಡು ವಿದ್ಯುತ್ ಬಳಕೆಯಲ್ಲಿ ದಕ್ಷತೆ ಮತ್ತು ಗರಿಷ್ಠೀಕರಣ ಕ್ರಮಗಳೆಡೆ ತನ್ನ ಜವಾಬ್ದಾರಿಯನ್ನು ಮನಗಂಡಿದೆ.

ಪರಿಸರ ವಿಭಾಗವು ಸೂಕ್ತ ಪರಿವೀಕ್ಷಣಾ ಕ್ರಮಗಳನ್ನು ಅಳವಡಿಸಿಕೊಂಡು ಸೂಕ್ತವಾದ ತಂತ್ರಜ್ಞಾನದೊಂದಿಗೆ ಗಣಿಗಾರಿಕೆಯ ವಿವಿಧ ಹಂತಗಳಲ್ಲಿನ ಮಾಲಿನ್ಯವನ್ನು ತಡೆಯಲೋಸುಗ ಕ್ರಮಗಳನ್ನು ಕೈಗೊಂಡಿದೆ.

ಪರಿಸರ ನಿರ್ವಹಣಾ ನೀತಿಗಳು :

- ಎಲ್ಲ ಶಾಸನಬದ್ಧ ಅವಶ್ಯಕತೆಗಳನ್ನು ಪಾಲಿಸುವುದು.
- ನಿರಂತರವಾಗಿ ಪರಿಸರ, ಸಾಮಾಜಿಕ ಮತ್ತು ಆರ್ಥಿಕ ಉತ್ಕೃಷ್ಟತೆಯ ಜೊತೆಗೆ ಸುರಕ್ಷಿತ ಕಾರ್ಯವಾತಾವರಣವನ್ನು ಸುಧಾರಿಸುವುದು.
- ಮುಕ್ತತೆ, ಪಾರದರ್ಶಕತೆ ಮತ್ತು ಸುಧಾರಿತ ಹೊಣೆಗಾರಿಕೆಗಳ ಮೂಲಕ ಸಮುದಾಯದ ಜೊತೆಗೂಡಿ ಪಾರಸರಿಕ ನಿರ್ವಹಣೆಯನ್ನು ಮಾಡುವುದು.

ಹಸಿರು ತಾಂತ್ರಿಕತೆಗಳು :

ಎ) ಶುದ್ಧ ತಾಂತ್ರಿಕತೆ :

ಶುದ್ಧ ತಾಂತ್ರಿಕತೆಯ ಮೂಲಕ ಸಂಸ್ಕರಿಸಲಾದ ನೀರನ್ನು ಶೂನ್ಯ ತ್ಯಾಜ್ಯ ಬಿಡುಗಡೆಗಾಗಿ **"**3R**"** ತತ್ವಗಳನ್ನು (ಕಡಿಮೆಗೊಳಿಸುವುದು, ಪುನಃ ಸ್ವಾಧೀನ, ಪುನರ್ಬಳಕೆ) ಅಳವಡಿಸಿಕೊಳ್ಳಲು ಸಾಧ್ಯವಾಗಿದೆ.

ರಾಸಾಯನಿಕ ಬಳಕೆಯನ್ನು ಕಡಿಮೆಗೊಳಿಸಿ ಮತ್ತು ನೀರನ್ನು ಸಂಪೂರ್ಣ ಪುನರ್‌ಬಳಕೆ ಮಾಡಿ ಸಂಪೂರ್ಣ ನಿರ್ವಿಶೀರಣದ ಮೂಲಕ ನೀರಿನಲ್ಲಿ ಶೂನ್ಯ ತ್ಯಾಜ್ಯ ಬಿಡುಗಡೆಯನ್ನು ಸಾಧಿಸುವಲ್ಲಿ ಪಾರಿಸಾರಿಕ ಮಾನದಂಡಗಳ ಮೂಲಕ ಹಾನಿಕಾರಕ ವಸ್ತುವಾದ ಸಯನೈಡ್ ಅಂಶವನ್ನು ಕಡಿಮೆಗೊಳಿಸುವುದರೊಂದಿಗೆ ಶುದ್ಧ ತಾಂತ್ರಿಕತೆಯನ್ನು ಅಳವಡಿಸಿಕೊಳ್ಳುವುದು.

ಬಿ) ತ್ಯಾಜ್ಯಗಳ ಪುನರ್‌ಬಳಕೆ / ಪುನರ್ಸಂಸ್ಕರಣೆ

ಹಟ್ಟಿ ಚಿನ್ನದ ಗಣಿ ಕಂಪನಿಯು ಶೂನ್ಯ ತ್ಯಾಜ್ಯ ಬಿಡುಗಡೆಯನ್ನು ಸಾಧಿಸುವಲ್ಲಿ ಅನೇಕ ಪರಿಸರ ಸ್ನೇಹಿ ಕ್ರಮಗಳನ್ನು ಅಳವಡಿಸಿಕೊಂಡಿದೆ.

ಸಂಸ್ಕರಣಾ ನೀರನ್ನು ಸಂಪೂರ್ಣವಾಗಿ ಪುನರ್ಸಂಸ್ಕರಣೆ ಮಾಡಿ ಪರಿಸರಕ್ಕೆ ಶೂನ್ಯ ತ್ಯಾಜ್ಯವನ್ನು ಬಿಡುಗಡೆಗೊಳಿಸುವುದು.

ಆಕ್ಸಿಡೇಶನ್ ಕೊಳದಿಂದ ಉತ್ಪತ್ತಿಯಾಗುವ ನೀರನ್ನು ತೋಟಗಾರಿಕೆ ಮತ್ತು ಅರಣ್ಯೀಕರಣ ಚಟುವಟಿಕೆಗಳಿಗಾಗಿ ಪುನರ್ ಬಳಕೆ ಮಾಡುವುದು.

ಸಯನೈಡ್ ಬಳಕೆಯನ್ನು ಕಡಿಮೆ ಮಾಡಲೋಸುಗ ಬಳಕೆಯಾದ ಸಯನೈಡನ್ನು ಸಂಸ್ಕರಣೆಯಲ್ಲಿ ಪುನರ್ ಬಳಕೆ ಮಾಡುವುದು ಮತ್ತು ತನ್ಮೂಲಕ ಸಯನೈಡ್ ಬಳಕೆಯನ್ನು ತಗ್ಗಿಸುವುದು.

ಸರ್ಫೇಸ್ ಅಬ್ಸಾರ್ಪ್ಷನ್ ಮೂಲಕ ಸಕ್ರಿಯ ಕಾರ್ಬನ್‌ನನ್ನು ಸಕ್ರಿಯಗೊಳಿಸಿ ಚಿನ್ನವನ್ನು ಪಡೆಯುವ ಮೂಲಕ ಕಚ್ಚಾ ಸಾಮಗ್ರಿಗಳ ಬಳಕೆಯನ್ನು ಕಡಿಮೆಮಾಡುವುದು.

ಸಮುದಾಯದಿಂದ ಉತ್ಪತ್ತಿಯಾದ ಜೈವಿಕ ಘನತ್ಯಾಜ್ಯವನ್ನು ಕಂಪೋಸ್ ಮಾಡಿ ಗಿಡಗಳಿಗೆ ಗೊಬ್ಬರವನ್ನಾಗಿ ಬಳಸುವುದು.

ಕ್ಯಾಂಟೀನ್‌ನಲ್ಲಿ ಹಬೆ ಉತ್ಪಾದಿಸಲು ಸೌರಶಕ್ತಿ ಹೀಟರನ್ನು ಅಳವಡಿಸುವ ಮೂಲಕ ಅಡುಗೆಗಾಗಿ ಸೌರಶಕ್ತಿಯನ್ನು ಬಳಸುವುದು.

ಅತಿಥಿ ಗೃಹದಲ್ಲಿ ಸ್ನಾನಕ್ಕಾಗಿ ಸೌರಶಕ್ತಿ ವಾಟರ್‌ಹೀಟರನ್ನು ಸ್ಥಾಪಿಸುವುದು.

ನವೀಕರಿಸಬಹುದಾದ ಮತ್ತು ಸಮರ್ಥನೀಯ ಸೌರಶಕ್ತಿಯ ಬಳಕೆಗಾಗಿ ಬದಲಿ ಆಧಾರದ ಮೇಲೆ ಎಲ್ಲ ಅಧಿಕಾರಿಗಳ ವಸತಿಗೃಹಗಳಿಗೆ ಸೌರಶಕ್ತಿ ಎಮರ್ಜೆನ್ಸಿ ಲೈಟಿಂಗ್ ಸಿಸ್ಟಮನ್ನು ಉಚಿತವಾಗಿ (150 ವಸತಿಗೃಹಗಳಿಗೆ) ಒದಗಿಸಲೋಸುಗ ಸ್ಥಾಪಿಸಲಾಗಿದೆ.

ಸಿ) ನೀರು ಮತ್ತು ತ್ಯಾಜ್ಯ ನೀರು ನಿರ್ವಹಣೆ

ಕಾಲೋನಿ ಮತ್ತು ಸಮೀಪದ ಗ್ರಾಮಗಳಾದ ಗುರುಗುಂಟ, ಕೋಟ ಮತ್ತು ಹಟ್ಟಿಗಳಿಗೆ ಸಂಸ್ಕರಿಸಿದ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿದೆ.

ಆವರ್ತಕ ಸಮಯಗಳಲ್ಲಿ ಸ್ಥಾವರದಲ್ಲಿ ಮತ್ತು ಸುತ್ತಮುತ್ತಲಿನ ಡಂಪ್ ಪ್ರದೇಶಗಳಲ್ಲಿ ಅಂತರ್ಜಲದ ಪರಿಮಾಣವನ್ನು ಪರೀಕ್ಷಿಸುವುದು.

ಕಾಲೋನಿಗಳಿಂದ ಸಂಗ್ರಹವಾದ ಚರಂಡಿ ನೀರನ್ನು ಸಂಸ್ಕರಿಸಿ ತೋಟಗಾರಿಕೆಗಾಗಿ ಮತ್ತು ಅರಣ್ಯೀಕರಣಕ್ಕಾಗಿ ಬಳಸುವುದು.

ಈಗಿರುವ ರೊಜ್ಜು ನೀರು ಸಂಸ್ಕರಣಾ ಘಟಕದಲ್ಲಿನ ಸಂಸ್ಕರಣೆಯನ್ನು ಉನ್ನತೀಕರಿಸುವ ಮೂಲಕ ಕಾಲೋನಿಯಿಂದ ಬರುವ ಮತ್ತು ಗ್ಯಾರೇಜಿನಿಂದ ಬರುವ ತೊಳೆದ ನೀರು ಮತ್ತು ಆಸ್ಪತ್ರೆಯಿಂದ ಬರುವ ಶುದ್ಧೀಕರಿಸಿದ ತ್ಯಾಜ್ಯ ದ್ರವವನ್ನೂ ಸೇರಿದಂತೆ ಒಳಚರಂಡಿ ನೀರನ್ನು ಸಂಸ್ಕರಿಸುವುದು.

ಡಿ) ಟೈಲಿಂಗ್ ಡಂಪ್‌ಗಳ ನಿರ್ವಹಣೆ :

ಟೈಲಿಂಗ್ ಡಂಪ್‌ಗಳನ್ನು ರೂಪಿಸುವುದು : ಸ್ಲರ್ರಿ ರೂಪದ ಟೈಲಿಂಗ್‌ಗಳನ್ನು ಸೂರ್ಯನ ಶಾಖದಲ್ಲಿ ಒಣಗಿಸಲು ಮತ್ತು ಘನೀಕರಿಸಿ ನೀರಿನ ಓಟವನ್ನು ಮತ್ತು ಲೀಚಿಂಗ್‌ನ ಪರಿಣಾಮವನ್ನು ತಗ್ಗಿಸುವುದು. ತಿಳಿಯಾದ ನೀರನ್ನು ಶೇಖರಿಸಿ ಸಂಗ್ರಾಹ ಕೊಳಗಳಲ್ಲಿ/ಸಂಗ್ರಾಹ ತೊಟ್ಟಿಗಳಲ್ಲಿ ಶೇಖರಿಸಿ ಅದನ್ನು ಮತ್ತೆ ಸ್ಥಾವರಗಳಲ್ಲಿ ಪುನರ್‌ಬಳಕೆ ಮಾಡುವುದು.

ಪರಿಸರ ಮತ್ತು ಅರಣ್ಯ ಮಂತ್ರಾಲಯ (MOEF), ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಲಿ/ಐಬಿಎಂ/ಡಿಡಿಎಂಎಸ್ ಅವರ ಮಾರ್ಗಸೂಚಿಗಳ ಮೇರೆಗೆ ಟೈಲಿಂಗ್ ಡಂಪ್‌ಗಳ ನಿರ್ವಹಣೆಯನ್ನು ಅಗತ್ಯ ಸುರಕ್ಷಿತ ಮತ್ತು ಪಾರಿಸಾರಿಕ ಕಾಳಜಿಯೊಂದಿಗೆ ಮಾಡಲಾಗಿದೆ ಮತ್ತು ಟೈಲಿಂಗ್ ತೋಟಗಳ ಸುತ್ತ ಸಸ್ಯವರ್ಗವನ್ನು ಬೆಳೆಸುವಲ್ಲಿ ಪ್ರಯತ್ನಗಳನ್ನು ಮಾಡಲಾಗುತ್ತಿದೆ.

ಇ) ಘನ ತ್ಯಾಜ್ಯ ನಿರ್ವಹಣೆ

- ಕೈಗಾರಿಕಾ ಮತ್ತು ಸಾಮುದಾಯಿಕ ತ್ಯಾಜ್ಯಗಳನ್ನು ಸಂಪೂರ್ಣವಾಗಿ ಶಾಸನಬದ್ಧ ರೀತಿಯಲ್ಲಿ ನಿರ್ವಹಿಸಲಾಗುತ್ತಿದೆ. ಕಾಲೋನಿಯಲ್ಲಿ ಸಾಮುದಾಯಿಕತ್ಯಾಜ್ಯವನ್ನು ಬಾಗಿಲಿನಿಂದ ಬಾಗಿಲಿಗೆ ಹೋಗಿ ಸಂಗ್ರಹಿಸಲಾಗುತ್ತಿದೆ.
- ವಿಂಗಡಣೆಗಾಗಿ ಪ್ರಾಮುಖ್ಯತೆಯನ್ನು ನೀಡಲಾಗುತ್ತಿದೆ.
- ಘನ ತ್ಯಾಜ್ಯಗಳನ್ನು ಘನ ತ್ಯಾಜ್ಯಗಳ(ಆಡಳಿತ ಮತ್ತು ನಿರ್ವಹಣೆ) ನಿಯಮಗಳ ಪ್ರಕಾರ ವೈಜ್ಞಾನಿಕವಾಗಿ ವಿಲೇವಾರಿ ಮಾಡಲೋಸುಗ ಎರಡು ಎಕರೆ ಪ್ರದೇಶವನ್ನು ಬಳಸಿಕೊಳ್ಳಲಾಗಿದೆ.
- ಜೈವಿಕ ತ್ಯಾಜ್ಯ/ಆಹಾರ ತ್ಯಾಜ್ಯವನ್ನು ಸಂಸ್ಕರಿಸಲೋಸುಗ 5ಟಿಪಿಡಿ ಬಯೋಗ್ಯಾಸ್ ಸ್ಥಾವರದ ಸ್ಥಾಪನೆ.

ಎಫ್) ಆಸ್ಪತ್ರೆಯ ಘನ ತ್ಯಾಜ್ಯ ನಿರ್ವಹಣೆ

110 ಹಾಸಿಗೆಗಳ ಆಸ್ಪತ್ರೆಯಲ್ಲಿ ಉತ್ಪತ್ತಿಯಾಗುವ ಜೈವಿಕ–ವೈದ್ಯಕೀಯ ತ್ಯಾಜ್ಯವನ್ನು ನಿರ್ವಹಿಸಲು ವಿವಿಧ ಬಣ್ಣಗಳ ಡಬ್ಬಗಳನ್ನು ಜೈವಿಕ–ವೈದ್ಯಕೀಯ (ಆಡಳಿತ ಮತ್ತು ನಿರ್ವಹಣೆಗಳು) ನಿಯಮಗಳ ಪ್ರಕಾರ ವಿಗಂಡಿಸಲಾಗುತ್ತದೆ ಮತ್ತು ಸಾಮಾನ್ಯ ಜೈವಿಕ ವೈದ್ಯಕೀಯ ತ್ಯಾಜ್ಯ ಆಡಳಿತ ಮತ್ತು ನಿರ್ವಹಣೆಯ ಪ್ರದೇಶಕ್ಕೆ ಸಾಗಿಸಲಾಗುತ್ತದೆ. ಅಲ್ಲಿ ಅದನ್ನು ಜೈವಿಕ ವೈದ್ಯಕೀಯ ನಿಯಮಗಳಂತೆ ನಿರ್ವಹಿಸಲಾಗುತ್ತದೆ.

ಜಿ) ಅರಣ್ಯೀಕರಣ – ಜೈವಿಕ ಇಂಧನ ಜಾತಿಗಳು

ಕರ್ನಾಟಕ ರಾಜ್ಯ ಅರಣ್ಯ ಇಲಾಖೆ, ರಾಯಚೂರುರವರ ಸಹಯೋಗದೊಂದಿಗೆ ನರ್ಸರಿಯನ್ನು ಸ್ಥಾಪಿಸಲಾಗಿದೆ.

ಹಾಂಗ್ – 15,000, ಸಿಮೆರುಬ – 2000 ಮತ್ತು ನೀಮ್ – 3000ನ್ನೊಳಗೊಂಡ 20,000 ಜೈವಿಕ ಇಂಧನ ಜಾತಿಗಳನ್ನು ಬೆಳೆಸಲಾಗಿದೆ.

60 ಹೆಕ್ಟೇರ್ ಪ್ರದೇಶದಲ್ಲಿ ಬ್ಲಾಕ್ ತೋಟಗಾರಿಕೆ ಮಾಡುವ ಕಾರ್ಯವು ಪ್ರಗತಿಯಲ್ಲಿದೆ. ತೋಟಗಾರಿಕೆಯನ್ನು ವಿವಿಧ ಸ್ಥಳಗಳಲ್ಲಿ ಮಾಡಲಾಗಿದೆ.

ಹೆಚ್) ಅಡುಗೆ ಮನೆ ತ್ಯಾಜ್ಯ ಆಧಾರಿತ ಜೈವಿಕ ಅನಿಲ ಉತ್ಪಾದನಾ ಘಟಕ

ಮಾರ್ಚ್ 2014ರಲ್ಲಿ 85 ಲಕ್ಷ ರೂ.ಗಳ ವೆಚ್ಚದಲ್ಲಿ 5 TPD ಸಾಮರ್ಥ್ಯದ ಆಹಾರ ಆಧಾರಿತ ತ್ಯಾಜ್ಯ ಜೈವಿಕ ಅನಿಲ ಘಟಕವನ್ನು ಸ್ಥಾಪಿಸಲಾಯಿತು. ಮಾರ್ಚ್ ತಿಂಗಳೊಂದರಲ್ಲೇ 19410 ಕೆ.ಜಿ. ಆಹಾರ ತ್ಯಾಜ್ಯದಿಂದ 1230M^3 ಜೈವಿಕ ಅನಿಲವನ್ನು ಉತ್ಪಾದಿಸಲಾಯಿತು.

ಐ) ಜೈವಿಕ ಇಂಧನ ಪಾರ್ಕ್

ಯಾದಗಿರಿ ಜಿಲ್ಲೆಯಲ್ಲಿ ಹಟ್ಟಿ ಚಿನ್ನದ ಗಣಿ ಕಂಪನಿಯು ತಿಂತಿಣಿ ತಾಮ್ರ ಯೋಜನೆಯ ಪ್ರದೇಶದಲ್ಲಿನ 42 ಎಕರೆ ಭೂಮಿಯನ್ನು 30 ವರ್ಷಗಳ ಗುತ್ತಿಗೆಯನ್ನು ಹಟ್ಟಿ ಚಿನ್ನದ ಗಣಿ ಕಂಪನಿ, ಕರ್ನಾಟಕ ರಾಜ್ಯ ಬಯೋಫ್ಯೂಯಲ್ ಡೆವಲಪ್‌ಮೆಂಟ್ ಬೋರ್ಡ್ ಮತ್ತು ಯೂನಿವರ್ಸಿಟಿ ಆಫ್ ಅಗ್ರಿಕಲ್ಚರಲ್ ಸೈನ್ಸ್ (UAS)ರೊಂದಿಗಿನ ತ್ರಿಪಕ್ಷೀಯ ಒಪ್ಪಂದದ ಮೇರೆಗೆ ನೀಡಲಾಗಿ ಜೈವಿಕ ಇಂಧನ ಪಾರ್ಕಿನ ಸ್ಥಾಪನಾ ಕಾರ್ಯವು ಪ್ರಗತಿಯಲ್ಲಿದೆ.

ಜೆ) ತಿಳುವಳಿಕೆಯ ಕಾರ್ಯಕ್ರಮಗಳು

ಆಸ್ಪತ್ರೆಯಲ್ಲಿನ ಎಲ್ಲ ನೌಕರರು/ವೈದ್ಯರು/ನರ್ಸಿಂಗ್ ವಿದ್ಯಾರ್ಥಿಗಳಿಗಾಗಿ ತಿಳುವಳಿಕಾ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ಆಸ್ಪತ್ರೆಯ ಘನ ತ್ಯಾಜ್ಯ ಆಡಳಿತ ನಿರ್ವಹಣೆ, ಸುರಕ್ಷೆ, ಸಂಗ್ರಹ, ವಿಂಗಡಣೆ, ಸಾಗಣೆ, ವಿಲೇವಾರಿ ಮತ್ತು ಸಂಸ್ಕರಣೆ ಬಗೆಗಿನ ತಿಳುವಳಿಕಾ ಕಾರ್ಯಕ್ರಮಗಳನ್ನು ಜೈವಿಕ ವೈದ್ಯಕೀಯ ತ್ಯಾಜ್ಯ (ಆಡಳಿತ ಮತ್ತು ನಿರ್ವಹಣೆ) ನಿಯಮಗಳ ಪ್ರಕಾರ ಮಾಡಲಾಗುತ್ತಿದೆ.

ಕೆ) ಪ್ರಶಸ್ತಿಗಳು

ಐಬಿಎಂರವರಿಂದ ಈ ಕೆಳಗಿನ ಪ್ರಶಸ್ತಿಗಳನ್ನು ಸ್ವೀಕರಿಸಲಾಗಿದೆ :

ಹಟ್ಟಿ ಚಿನ್ನದ ಗಣಿ

ಶಕ್ತಿ ಸಂರಕ್ಷಣೆ – ಶಕ್ತಿ ಸಂರಕ್ಷಣೆಯ ಅತ್ಯುತ್ತಮ ಪ್ರಯತ್ನಗಳಿಗಾಗಿ ವಿಶೇಷ ಬಹುಮಾನ.

ಸೌಂದರ್ಯ ಮತ್ತು ಲಾವಣ್ಯ – ಮೊದಲನೇ ಬಹುಮಾನ

ಬೆನಿಫಿಸಿಯೇಷನ್ ಸ್ಥಾವರದ ಸ್ಥಾಪನೆ – ಮೊದಲನೇ ಬಹುಮಾನ

ಉಟಿ ಚಿನ್ನದ ಗಣಿ

ಸಮುದಾಯ ಅಭಿವೃದ್ಧಿ – ಮೊದಲನೇ ಬಹುಮಾನ

ಬೆನಿಫಿಸಿಯೇಷನ್ ಸ್ಥಾವರದ ಸ್ಥಾಪನೆ – ಮೊದಲನೇ ಬಹುಮಾನ

ಪ್ರಕಟಣೆ ಮತ್ತು ಪ್ರಚಾರ – ಎರಡನೇ ಬಹುಮಾನ

ಹಿರಾಬುದ್ದಿನಿ ಚಿನ್ನದ ಗಣಿ

ಪ್ರಕಟಣೆ ಮತ್ತು ಪ್ರಚಾರ – ಮೊದಲನೇ ಬಹುಮಾನ

ಮಾನವ ಸಂಪನ್ಮೂಲ ಅಭಿವೃದ್ಧಿ

ತರಬೇತಿ :

2013–14ನೇ ಸಾಲಿನಲ್ಲಿ ವರ್ಷದಲ್ಲಿ 8 ನೌಕರರು 71 ಅಧಿಕಾರಿಗಳು ಸ್ಥಾನಿಕ ತರಬೇತಿ ಕಾರ್ಯಕ್ರಮಗಳಿಗೆ ಹಾಜರಾಗಿದ್ದರು. 190 ಅಧಿಕಾರಿಗಳು ಮತ್ತು 134 ನೌಕರರು ಆಂತರಿಕ ತರಬೇತಿ ಮತ್ತು ಅನಿವಾಸಿ ತರಬೇತಿ ಕಾರ್ಯಕ್ರಮಗಳಲ್ಲಿ/ಕಾರ್ಯಾಗಾರಗಳು ಹಾಗೂ ವಿಚಾರ ಗೋಷ್ಠಿಗಳಿಗೆ ಹಾಜರಾಗಿದ್ದರು.

ವಿದ್ಯಾರ್ಥಿಗಳಿಗೆ ವಿವಿಧ ವಿಭಾಗಗಳಾದ ಪ್ರಾಜೆಕ್ಟ್ ಕೆಲಸ, ಬ್ಲಾಕ್ ಪ್ಲೇಸ್‌ಮೆಂಟ್, ಫೀಲ್ಡ್ ವರ್ಕ್ ಮತ್ತು ಶಿಶಿಕ್ಷು ತರಬೇತಿ ಮುಂತಾದವುಗಳಲ್ಲಿ ಅವಕಾಶಗಳನ್ನು ನೀಡಲಾಗುತ್ತಿದೆ.

ಮಾನವ ಶಕ್ತಿ :

31ನೇ ಮಾರ್ಚ್ 2014ರಂದು ಇದ್ದ ಉದ್ಯೋಗಿಗಳ ಸಂಖ್ಯೆ 4308 ಅದರ ವಿವರಗಳು ಕೆಳಕಂಡಂತಿವೆ :

ವಿವರಗಳು	**ಒಟ್ಟು**	**ಪರಿಶಿಷ್ಟ ಜಾತಿ**	**ಶೇಕಡಾವಾರು**	**ಪರಿಶಿಷ್ಟ ಪಂಗಡ**	**ಶೇಕಡಾವಾರು**
ಅಧಿಕಾರಿಗಳು	187	33	18	12	6
ಕಛೇರಿ ನೌಕರರು	246	58	24	13	5
ಮೇಲುಸ್ತುವಾರಿ	605	151	25	38	6
ಇತರರು	3270	840	26	471	14
ಒಟ್ಟು	4308	1082	93	534	12

ವಾರ್ಷಿಕ ವೆಲ್‌ಫೇರ್ ವರದಿ :

ಹಟ್ಟಿ ಚಿನ್ನದ ಗಣಿ ಕಂಪನಿಯು ಸಾರ್ವಜನಿಕ ಉದ್ದಿಮೆಯಾಗಿದ್ದು ಗಣಿಗಳ ಅಧಿನಿಯಮ 1952 ಮತ್ತು ಗಣಿಗಳ ನಿಯಮ 1955ಕ್ಕೆ ಅಧೀನವಾಗಿ ಕಾರ್ಯನಿರ್ವಹಿಸುತ್ತದೆ. ಒಬ್ಬ ಮಾದರಿ ಉದ್ಯೋಗದಾತನಾಗಿ ಕಂಪನಿಯು ತನ್ನ ಉದ್ಯೋಗಿಗಳ ಆರೋಗ್ಯ, ಸ್ವಚ್ಛತೆ ಸುರಕ್ಷತೆ ಮತ್ತು ಕಲ್ಯಾಣಗಳೆಡೆಗೆ ಗಮನವನ್ನು ನೀಡುತ್ತದೆ. ಇದಲ್ಲದೆ ಗಾಳಿಕಿಂಡಿ, ಬೆಳಕು, ತಣ್ಣನೆ ಮತ್ತು ಸುರಕ್ಷಿತ ನೀರು ಸರಬರಾಜು ಪೂರೈಕೆಯನ್ನು ಎಲ್ಲ ಕಾರ್ಯಪ್ರದೇಶಗಳಲ್ಲಿ ನೀಡುತ್ತದೆ.

ಕಲ್ಯಾಣ ಮಂಟಪ :

ಕಂಪನಿಯು ತನ್ನ ಉದ್ಯೋಗಿಗಳ ಮತ್ತು ಅವರ ಅವಲಂಬಿತರ ಅನುಕೂಲಕ್ಕಾಗಿ ಒಂದು ಸುಸಜ್ಜಿತ ಕಲ್ಯಾಣ ಮಂಟಪವನ್ನು ನಿರ್ಮಿಸಿದೆ. ಪ್ರಸ್ತುತ ವರ್ಷದಲ್ಲಿ ಸ್ವರ್ಣ ಭವನ ಕಲ್ಯಾಣ ಮಂಟಪವನ್ನು ಮದುವೆ ಮತ್ತು ಇತರ ಸಾಮಾಜಿಕ ಮತ್ತು ಧಾರ್ಮಿಕ ಸಮಾರಂಭಗಳಿಗಾಗಿ ಕಡಿಮೆ ಬೆಲೆಯಲ್ಲಿ ನೀಡಲಾಗಿದೆ.

ಹೆಚ್‌ಜಿಎಂ ಇನ್ಸ್ಟಿಟ್ಯೂಟ್ :

ಯುವಕರಿಗಾಗಿ ಒಂದು ಸುಸಜ್ಜಿತವಾದ ಮಲ್ಟಿ ಜಿಮ್‌ನ್ನು ಸ್ಥಾಪಿಸಿದ್ದು ಒಳಾಂಗಣ ಮತ್ತು ಹೊರಾಂಗಣ ಆಟಗಳನ್ನು ಉದ್ಯೋಗಿಗಳು ಮತ್ತು ಅವರ ಮಕ್ಕಳಿಗೆ ಏರ್ಪಡಿಸಲಾಗಿತ್ತು. ಒಂದು ಗ್ರಂಥಾಲಯವನ್ನೂ ಹೊಂದಿ ಪ್ರತಿದಿನ ಎಲ್ಲಾ ಭಾಷೆಯ ವೃತ್ತ ಪತ್ರಿಕೆಗಳನ್ನು ಸಾಮಾನ್ಯ ಜ್ಞಾನಾರ್ಜನೆಗಾಗಿ ಒದಗಿಸಲಾಗಿದೆ.

ಆರೋಗ್ಯ ಪಾಲನೆ

ಹಟ್ಟಿ ಚಿನ್ನದ ಗಣಿಯ ಆಸ್ಪತ್ರೆಯು 110 ಹಾಸಿಗೆಗಳ ಸುಸಜ್ಜಿತ ಆಸ್ಪತ್ರೆಯಾಗಿದ್ದು ಎಲ್ಲಾ ನೌಕರರ ಮತ್ತು ಅವರ ಅವಲಂಬಿತರ ಅವಶ್ಯಕತೆಗಳನ್ನು ಪೂರೈಸುತ್ತಿದೆ. ಸುತ್ತಮುತ್ತಲಿನ ಗ್ರಾಮಗಳ ರೋಗಿಗಳಿಗೂ ಸಾಂಕೇತಿಕ ಬೆಲೆಯ ಆಧಾರದಲ್ಲಿ ಚಿಕಿತ್ಸೆ ನೀಡುತ್ತದೆ.

ವೈದ್ಯರು ಮತ್ತು ತಜ್ಞರನ್ನು ಒಳಗೊಂಡಂತೆ 14 ವೈದ್ಯರುಗಳು 157 ಅರೆ ವೈದ್ಯಕೀಯ ಸಿಬ್ಬಂದಿ ಮತ್ತು ಕಾರ್ಮಿಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಪ್ರತಿದಿನ ಬರುವ ಹೊರರೋಗಿಗಳ ಸಂಖ್ಯೆ 850 ರಿಂದ 900 ಇದೆ. ವರದಿಯ ವರ್ಷದಲ್ಲಿ ಸುಮಾರು 2,36,966 ಹೊರ ರೋಗಿಗಳಿಗೆ ಚಿಕಿತ್ಸೆ ನೀಡಿ, 26,792 ಒಳ ರೋಗಿಗಳಿಗೂ ಚಿಕಿತ್ಸೆ ನೀಡಲಾಯಿತು. 394 ದೊಡ್ಡ ಶಸ್ತ್ರಚಿಕಿತ್ಸೆಗಳು ಮತ್ತು 1368 ಲಘು ಶಸ್ತ್ರಚಿಕಿತ್ಸೆಗಳನ್ನು ಆಸ್ಪತ್ರೆಯಲ್ಲಿ ನಡೆಸಲಾಯಿತು.

ವಸತಿ :

ಅವರವರ ದರ್ಜೆ ಮತ್ತು ಜೇಷ್ಠತೆಯ ಆಧಾರದ ಮೇಲೆ ಕಂಪನಿಯು ತನ್ನ ಅಧಿಕಾರಿಗಳು ಮತ್ತು ನೌಕರರಿಗೆ ವಸತಿ ಸೌಕರ್ಯವನ್ನು ನೀಡುತ್ತದೆ. ಅಧಿಕಾರಿಗಳು ಮತ್ತು ನೌಕರರ ಪ್ರತಿನಿಧಿಗಳನ್ನೊಳಗೊಂಡ ವಸತಿ ಸಮಿತಿಯೊಂದನ್ನು ಹೊಂದಲಾಗಿದೆ. ವಸತಿ ಗೃಹಗಳಿಗೆ ಅಗತ್ಯ ಸೌಕರ್ಯಗಳಾದ ಕುಡಿಯುವ ನೀರು, ವಿದ್ಯುತ್ ಸರಬರಾಜು, ಆಟದ ಮೈದಾನ ಸಮುದಾಯ ಭವನಗಳನ್ನು ಒದಗಿಸಿ ಉದ್ಯಾನವನ ಮತ್ತು ಆಟದ ಮೈದಾನಗಳನ್ನು ನಿರ್ವಹಣೆ ಮಾಡಲಾಗುತ್ತಿದೆ. ವಿದ್ಯುತ್ತನ್ನು ವಸತಿ ಗೃಹಗಳಿಗೆ ಸಬ್ಸಿಡಿ ಆಧಾರದ ಮೇಲೆ ಪೂರೈಸಲಾಗುತ್ತದೆ. ಈ ದಿನದಂದು ಒಟ್ಟು 2574 ವಸತಿ ಗೃಹಗಳಿವೆ. ಕಂಪನಿಯ ವಸತಿ ಗೃಹಗಳಲ್ಲಿ ಅಥವಾ ಬೇರೆಡೆ ವಾಸವಾಗಿರುವ ಎಲ್ಲ ನೌಕರರಿಗೂ ಉಚಿತವಾಗಿ ಕೇಬಲ್ ಟಿವಿ ಸಂಪರ್ಕವನ್ನು ನೀಡಲಾಗಿದೆ.

ವಿದ್ಯಾಸಂಸ್ಥೆಗಳು :

ಹಟ್ಟಿ ಕ್ಯಾಂಪಿನಲ್ಲಿ ಪ್ರಾಥಮಿಕ, ಮಾಧ್ಯಮಿಕ ಮತ್ತು ಕಾಲೇಜು ಹಂತದಲ್ಲಿ 10,500 ವಿದ್ಯಾರ್ಥಿಗಳಿಗಾಗಿ ಒಟ್ಟು 33 ವಿದ್ಯಾಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಕಂಪನಿಯು ಅನೇಕ ಸೌಕರ್ಯಗಳನ್ನು ಈ ವಿದ್ಯಾ ಸಂಸ್ಥೆಗಳಿಗೆ ತನ್ನ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿಯೆಡೆಗೆ ನೀಡುತ್ತದೆ.

ಕಂಪನಿಯು ಕಾರ್ಮಿಕ ಸಂಘದೊಂದಿಗೆ ಸೌಹಾರ್ದಯುತ ಸಂಬಂಧವನ್ನು ಹೊಂದಿದೆ. ನೌಕರಿಗೆ ಸಂಬಂಧಿಸಿದ ನೌಕರರ ಕುಂದು ಕೊರತೆಗಳನ್ನು ಸೌಹಾರ್ದಪೂರ್ವಕವಾಗಿ ಮಾತುಕತೆಗಳ/ಸಂಧಾನದ ಮೂಲಕ ಬಗೆಹರಿಸಿಕೊಳ್ಳಲಾಗುತ್ತದೆ.

ಮಾಹಿತಿ ಹಕ್ಕು ಕಾಯಿದೆ :

ನಿಮ್ಮ ಕಂಪನಿಯು ಒಂದು ಸರ್ಕಾರಿ ಉದ್ದಿಮೆಯಾದುದರಿಂದ, ಮಾಹಿತಿ ಹಕ್ಕು ಕಾಯ್ದೆ 2005 ರಂತೆ ಸೂಕ್ತ ಕ್ರಮಗಳನ್ನು ತೆಗೆದುಕೊಂಡಿರುತ್ತದೆ. ವರದಿಯ ವರ್ಷದಲ್ಲಿ, ನಿಮ್ಮ ಕಂಪನಿಯು ಒಟ್ಟು 534 ಅರ್ಜಿಗಳನ್ನು ಸ್ವೀಕರಿಸಿದ್ದು ಅವುಗಳಲ್ಲಿ 506 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿ 28 ಅರ್ಜಿಗಳು, 31–3–2014 ರಂದು ವಿಲೇವಾರಿಗಾಗಿ ಬಾಕಿಯಿವೆ.

ನಿರ್ದೇಶಕ ಮಂಡಳಿ :

ಕಂಪನಿಯ ಅಂತರ್ನಿಯಮಾವಳಿಗಳ ಪ್ರಕಾರ ನಿಮ್ಮ ಕಂಪನಿಯ ನಿರ್ದೇಶಕರುಗಳನ್ನು (ಅಧ್ಯಕ್ಷರನ್ನೂ ಒಳಗೊಂಡು), ಸರ್ಕಾರವು ನೇಮಿಸುತ್ತದೆ. 31ನೇ ಮಾರ್ಚ್ 2014ರಂದು ಕರ್ನಾಟಕ ಸರ್ಕಾರದಿಂದ ನೇಮಕಗೊಂಡ ಆರು ನಿರ್ದೇಶಕರು (ವ್ಯವಸ್ಥಾಪಕ ನಿರ್ದೇಶಕರು ಮತ್ತು ಅಧ್ಯಕ್ಷರನ್ನೂ ಒಳಗೊಂಡು) ನಿರ್ದೇಶಕ ಮಂಡಳಿಯಲ್ಲಿದ್ದರು.

ಕಳೆದ ವರದಿಯಿಂದ ಇಲ್ಲಿಯವರೆಗೆ ನಿರ್ದೇಶಕ ಮಂಡಳಿಯಲ್ಲಿ ಈ ಕೆಳಕಂಡ ಬದಲಾವಣೆಗಳಾಗಿವೆ.

ಕ್ರಮ ಸಂಖ್ಯೆ	ಹೆಸರು	ನೇಮಕಾತಿಯ ದಿನಾಂಕ	ಅಧಿಕಾರ ಸಮಾಪ್ತಿ ದಿನಾಂಕ	ನೇಮಕಾತಿ ಸ್ವರೂಪ
1.	ಶ್ರೀ ತುಷಾರ ಗಿರಿನಾಥ, ಐ.ಎ.ಎಸ್.	07.09.2013	-	ಅಧ್ಯಕ್ಷರು
2.	ಶ್ರೀ ಕೆ. ಅಮರನಾರಾಯಣ, ಐ.ಎ.ಎಸ್.	21.10.2013	07.09.2013	ಅಧ್ಯಕ್ಷರು
3.	ಶ್ರೀ ಎಸ್.ವಿ. ರಾಮಚಂದ್ರ	19.11.2010	14.05.2013	ಅಧ್ಯಕ್ಷರು
4.	ಶ್ರೀ ಕೆ. ಅಮರರನಾರಾಯಣ, ಐ.ಎ.ಎಸ್.	22.12.2012	07.09.2013	ನಿರ್ದೇಶಕರು
5.	ಶ್ರೀ ಅರವಿಂದ ಶ್ರೀವಾಸ್ತವ, ಐ.ಎ.ಎಸ್.	13.06.2013	-	ನಿರ್ದೇಶಕರು
6.	ಶ್ರೀ ಅಜಯ್ ಸೇಟ್, ಐ.ಎ.ಎಸ್.	05.08.2008	13.06.2013	ನಿರ್ದೇಶಕರು
7.	ಶ್ರೀ ಹೆಚ್. ಭಾಸ್ಕರ್, ಐ.ಎ.ಎಸ್.	01.10.2013	-	ನಿರ್ದೇಶಕರು
8.	ಶ್ರೀ ರಾಜೀವ್ ಚಾವ್ಲಾ, ಐ.ಎ.ಎಸ್.	14.06.2013	01.10.2013	ನಿರ್ದೇಶಕರು
9.	ಶ್ರೀ ಕೆ. ಶಿವರಾಂ, ಐ.ಎ.ಎಸ್.	02.03.2012	14.06.2013	ನಿರ್ದೇಶಕರು
10.	ಶ್ರೀ ಎಸ್. ಶಂಕರನಾರಾಯಣ, ಐ.ಎ.ಎಸ್.	01.10.2013	-	ನಿರ್ದೇಶಕರು
11.	ಶ್ರೀ ಹೆಚ್. ಆರ್. ಶ್ರೀನಿವಾಸ, ಐ.ಎ.ಎಸ್.	01.12.2010	01.10.2013	ನಿರ್ದೇಶಕರು
12.	ಶ್ರೀ ಮಹೇಶ್ವರ ರಾವ್, ಐ.ಎ.ಎಸ್.	12.10.2012	14.06.2013	ನಿರ್ದೇಶಕರು
13.	ಶ್ರೀ ಎಸ್. ದಯಾಶಂಕರ್, ಐ.ಎ.ಎಸ್.	18.02.2009	14.06.2013	ನಿರ್ದೇಶಕರು
14.	ಶ್ರೀ ಕೆ. ಶ್ರೀನಿವಾಸ್, ಕೆ.ಎ.ಎಸ್.	26.07.2014	-	ನಿರ್ದೇಶಕರು
15.	ಶ್ರೀ ಪಿ.ಎಸ್. ಕಾಂತರಾಜ್, ಕೆ.ಎ.ಎಸ್.	01.01.2013	26.07.2014	ನಿರ್ದೇಶಕರು
16.	ಶ್ರೀ ಜಿ.ಎ. ಅಡಗಟ್ಟಿ, ಕೆ.ಎ.ಎಸ್.	14.06.2013	01.10.2013	ನಿರ್ದೇಶಕರು

ಶಾಸನಬದ್ಧ ಲೆಕ್ಕ ಪರಿಶೋಧಕರು

ನಿಮ್ಮ ಕಂಪನಿಯು ಸರ್ಕಾರಿ ಕಂಪನಿಯಾದುದರಿಂದ ಲೆಕ್ಕಪತ್ರಗಳನ್ನು ಪರಿಶೋಧಿಸಲು ಶಾಸನಬದ್ಧ ಲೆಕ್ಕ ಪರಿಶೋಧಕರನ್ನು ಭಾರತ ಸರ್ಕಾರದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್‌ರವರು, ಕಂಪನಿ ಕಾಯಿದೆ 1956 ಸೆಕ್ಷನ್ 619(2)ರ ರಡಿಯಲ್ಲಿ ನೇಮಿಸುತ್ತಾರೆ. ಹಾಗಾಗಿ ಮೆ. ಸುಭಾಶ್ಚಂದ್ರ ಪಿ. ಕುದರಿ ಅಂಡ್ ಕಂಪನಿ, ಬೆಂಗಳೂರು ರವರನ್ನು 2013–14ನೇ ಸಾಲಿಗೆ ಶಾಸನಬದ್ಧ ಲೆಕ್ಕಪರಿಶೋಧಕರನ್ನಾಗಿ ನೇಮಿಸಲಾಗಿದೆ.

ಜವಾಬ್ದಾರಿಗಳು

ದೈನಂದಿನ ಕಾರ್ಯಚಟುವಟಿಕೆಗಳು ಕಂಪನಿಯ ನಿರ್ದೇಶಕರ ಮಂಡಳಿಯ ವಶದಲ್ಲಿದೆ. ವ್ಯವಸ್ಥಾಪಕ ನಿರ್ದೇಶಕರು ಕಂಪನಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿದ್ದು, ಅವರು ಹಿರಿಯ ಅಧಿಕಾರಿಗಳಿಂದ ನೆರವು ಪಡೆಯುತ್ತಾರೆ. ಎಲ್ಲಾ ಪ್ರಮುಖ ನಿರ್ಧಾರಗಳನ್ನು ನಿರ್ದೇಶಕರ ಮಂಡಳಿಯ ಅನುಮೋದನೆಯೊಂದಿಗೆ ತೆಗೆದುಕೊಳ್ಳಲಾಗುತ್ತದೆ. ನಿಮ್ಮ ನಿರ್ದೇಶಕರ ಮಂಡಳಿಯು ಕರ್ನಾಟಕ ಸರ್ಕಾರದ ಮತ್ತು ಷೇರುದಾರರ ಆದೇಶಗಳನ್ನು ಸಮಯಾನುಸಮಯಕ್ಕೆ ಪಾಲಿಸಬೇಕಿದೆ.

ನಿಮ್ಮ ನಿರ್ದೇಶಕರ ಮಂಡಳಿಯು, ಕರ್ನಾಟಕ ಸರ್ಕಾರ ಮತ್ತು ಷೇರುದಾರರ ಹಿತಾಸಕ್ತಿಗಳನ್ನು, ಅವರ ದೀರ್ಘಕಾಲೀನ ಮೌಲ್ಯಗಳಾದ ನೀತಿಗಳು, ಯೋಜನೆಗಳು, ತಂತ್ರಕೌಶಲ್ಯಗಳು, ಮಾರ್ಗದರ್ಶನಗಳು ಮತ್ತು ಸಾಮಾಜಿಕ ಯೋಜನೆಗಳ ಅನುಷ್ಠಾನವನ್ನೂ ಒಳಗೊಂಡಂತೆ, ಅವನ್ನು ಪ್ರತಿನಿಧಿಸುತ್ತದೆ. ಆಡಳಿತ ಮಂಡಳಿಯು, ನಿರ್ವಹಣೆ, ಆಡಳಿತ, ಹಣಕಾಸು, ತಾಂತ್ರಿಕ ನಿಪುಣತೆ ಒಳಗೊಂಡಂತೆ ಇರುವ ತಜ್ಞರ ಮಿಶ್ರಣವಾಗಿರುತ್ತದೆ. ನಿರ್ದೇಶಕರ ಮಂಡಳಿಯ ಸಭೆಗಳಲ್ಲಿ ಕೈಗೊಂಡ ನಿರ್ಧಾರಗಳನ್ನು ಸಮಯಾನುಸಮಯಕ್ಕೆ ಪರಿಶೀಲಿಸಲಾಗುತ್ತದೆ.

ನಿದೇಶಕರ ಜವಾವಾಬ್ದಾರಿಗಳ ನಿರೂಪಣಾ ಹೇಳಿಕೆ

1956 ರ ಕಂಪನಿಗಳ ಕಾಯಿದೆ ಸೆಕ್ಷನ್ 217ರ ಉಪವಿಧಿ 2ಏಏ ಪ್ರಕಾರ ನಿಮ್ಮ ನಿರ್ದೇಶಕರು ಹೇಳುವುದೇನೆಂದರೆ :

i) ದಿನಾಂಕ 31–3–2014 ಕ್ಕೆ ಮುಕ್ತಾಯವಾದ ವರ್ಷದ ಲೆಕ್ಕ ಪತ್ರಗಳನ್ನು ಅನ್ವಯವಾಗುವ ಲೆಕ್ಕಪತ್ರ ಮಾನದಂಡಗಳ ಪ್ರಕಾರ ತಯಾರಿಸಲಾಗಿದೆ.

ii) ದಿನಾಂಕ 31–3–2014ಕ್ಕೆ ಅಂತ್ಯವಾದ ವರ್ಷಕ್ಕೆ ಕಂಪನಿಯ ಸ್ಥಿತಿಗತಿಯ ಬಗೆಗೆ ನೈಜ ಮತ್ತು ನ್ಯಾಯವಾದ ನೋಟವನ್ನು ನೀಡಲೋಸುಗ ಅನ್ವಯವಾಗುತಂಹ ಲೆಕ್ಕಶಾಸ್ತ್ರ ಮಾನದಂಡಗಳನ್ನು, ಉಚಿತ ವಿವೇಚನೆಗಳನ್ನು ಮತ್ತು ಅಂದಾಜುಗಳನ್ನು ಆಯ್ಕೆ ಮಾಡಿಕೊಂಡು ಅವನ್ನು ಅವರು ಜಾರಿಗೊಳಿಸಿದ್ದಾರೆ.

iii) ಕಂಪನಿಗಳ ಕಾಯಿದೆ 1956 ರ ಪ್ರಕಾರ ಕಂಪನಿಯ ಆಸ್ತಿಗಳ ರಕ್ಷಣೆಗೆ, ವಂಚನೆ ಮತ್ತು ಅಕ್ರಮಗಳನ್ನು ತಡೆಯಲು, ಸಾಕಷ್ಟು ವಿವರವಾದ ಲೆಕ್ಕಪತ್ರಗಳನ್ನಿಡಲು ನಿರ್ದೇಶಕರು ಸಮರ್ಪಕ ಮತ್ತು ಅಗತ್ಯ ಕ್ರಮಗಳನ್ನು ತೆಗೆದುಕೊಂಡಿರುತ್ತಾರೆ.

iv) ಕಂಪನಿಯ ಲೆಕ್ಕಪತ್ರಗಳನ್ನು, ವ್ಯವಹಾರಗಳನ್ನು ಮುಂದುವರಿಸಿಕೊಂಡು ಹೋಗುವ ಆಧಾರದ ಮೇಲೆ ತಯಾರಿಸಲಾಗಿದೆ.

v) ವರದಿಯ ವರ್ಷದಲ್ಲಿ ಕಂಪನಿಯು ಷೇರುಗಳನ್ನು ಅಥವಾ ಆಧಾರ ಪತ್ರಗಳನ್ನು ಹಿಂಪಡೆದಿಲ್ಲ.

ಕೃತಜ್ಞತೆಗಳು

ನಿಮ್ಮ ನಿರ್ದೇಶಕರು ಕೇಂದ್ರ ಸರ್ಕಾರ, (ಗಣಿ ಇಲಾಖೆ, ಪರಿಸರ ಮತ್ತು ಕಾರ್ಮಿಕ ಇಲಾಖೆಗಳೂ ಸೇರಿ), ಕರ್ನಾಟಕ ಸರ್ಕಾರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಗಣಿ ಸುರಕ್ಷಾ ಮಹಾ ನಿರ್ದೇಶಕರು, ಭಾರತ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್, ಶಾಸನಬದ್ಧ ಲೆಕ್ಕಪರಿಶೋಧಕರು, ಆಂತರಿಕ ಲೆಕ್ಕಪರಿಶೋಧಕರು, ಕಾನೂನು ಸಲಹೆಗಾರರು, ಸಮಾಲೋಚಕರು, ಬ್ಯಾಂಕುಗಳು, ವಿಮಾ ಕಂಪನಿಗಳು, ಷೇರುದಾರರು, ಗ್ರಾಹಕರು, ಸರಬರಾಜುದಾರರು ಮತ್ತು ಇತರರಿಗೆ ಅವರು ನೀಡಿದ ನಿರಂತರ ಸಾಮಯಿಕ ಪರಾಮರ್ಶೆ, ಮಾರ್ಗದರ್ಶನ, ಸಹಕಾರಗಳಿಗಾಗಿ ಅವರನ್ನು ವಂದಿಸುತ್ತಾರೆ. ಕಂಪನಿಯ ಎಲ್ಲಾ ನೌಕರರು ಮತ್ತು ಅಧಿಕಾರಿಗಳು ನೀಡಿದ ಸಹಕಾರಕ್ಕಾಗಿ ಅವರನ್ನೂ ವಂದಿಸುತ್ತಾರೆ.

ಆಡಳಿತ ಮಂಡಳಿಯ ಪರವಾಗಿ

ಸಹಿ/–

ಬೆಂಗಳೂರು,
ತಾ : 02–09–2014

(ತುಷಾರ ಗಿರಿನಾಥ್)
ಅಧ್ಯಕ್ಷರು

ವಿಜಯಕೃಷ್ಣ ಕೆ.ಟಿ.
ಬಿಬಿಎಂ, ಎಲ್‌ಎಲ್‌ಬಿ, ಎಫ್‌ಸಿಎಸ್, ಎಐಸಿಡಬ್ಲ್ಯುಎ
ಕಂಪನಿ ಸೆಕ್ರೆಟರಿ

ಅಫೀಸ್ : ನಂ.496/4, 2ನೇ ಮಹಡಿ,
10ನೇ ಕ್ರಾಸ್, ಬಾಷ್ಯಂ ಸರ್ಕಲ್ ಹತ್ತಿರ
ಸದಾಶಿವನಗರ, ಬೆಂಗಳೂರು – 560 080
ದೂ. 23610847, ಫ್ಯಾಕ್ಸ್ : 41231106
ಈ–ಮೈಲ್ : ktvijayakrishna@gmail.com

ಸೆಕ್ರೆಟರಿಯಲ್ ಅನುಸರಣಾ ದೃಢೀಕರಣ ಪತ್ರ

ಕಂಪನಿಯ ನೊಂದಾವಣಿ ಸಂ: (ಸಿಐಎನ್): **ಯು85110ಕೆಎ1947ಎಸ್‌ಜಿಸಿ001321**
ನಾಮ ಮಾತ್ರ ಬಂಡವಾಳ : **ರೂ. 20,00,00,000/–**
ಪಾವತಿಯಾದ ಬಂಡವಾಳ : **ರೂ. 2,96,20,371/–**

ಗೆ
ದಿ ಹಟ್ಟಿ ಚಿನ್ನದ ಗಣಿ ಕಂಪನಿಯ ನಿಯಮಿತದ ಸದಸ್ಯರು,
ಮೂರನೆ ಮಹಡಿ, ಕೆಹೆಚ್‌ಬಿ ಕಾಂಪ್ಲೆಕ್ಸ್,
ನ್ಯಾಷನಲ್ ಗೇಮ್ಸ್ ವಿಲೇಜ್, ಕೋರಮಂಗಲ
ಬೆಂಗಳೂರು – 560047

ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತವು (ಕಂಪನಿ) 1956ರ ಕಂಪನಿ ಕಾಯ್ದೆ ಮತ್ತು 2013ರ ಕಂಪನಿ ಕಾಯ್ದೆಗೆ ಅನುಗುಣವಾಗುವಷ್ಟರ ಮಟ್ಟಿಗೆ ತತ್ಸಂಬಂಧಿತ ಕಾನೂನುಗಳು, ಮೆಮೊರಾಂಡಮ್ ಮತ್ತು ಸಂಸ್ಥೆಯ ಅಂತರ್ನಿನಿಯಮಾವಳಿಗಳಲ್ಲಿರುವಂತೆ ಇಡಬೇಕಾದ ರಿಜಿಸ್ಟರ್‌ಗಳು, ದಸ್ತಾವೇಜುಗಳು, ಪುಸ್ತಕಗಳು ಮತ್ತು ಕಾಗದ ಪತ್ರಗಳನ್ನಿಟ್ಟಿದ್ದು, ಅವುಗಳನ್ನು ದಿನಾಂಕ 31–3–2014ಕ್ಕೆ ಅಂತ್ಯವಾದ ಹಣಕಾಸು ವರ್ಷಕ್ಕೆ ಸಂಬಂಧ ಪಟ್ಟಂತೆ ನಾನು ಪರೀಕ್ಷಿಸಿದ್ದೇನೆ. ನನ್ನ ಅಭಿಪ್ರಾಯದಲ್ಲಿ ಮತ್ತು ನನಗೆ ದೊರೆತ ಉತ್ತಮ ಮಾಹಿತಿ, ನಡೆಸಿದ ಪರೀಕ್ಷೆಗಳು ಕಂಪನಿ, ಅದರ ಅಧಿಕಾರಿಗಳು, ಏಜೆಂಟರು ನೀಡಿದ ವಿವರಣೆಗಳ ಆಧಾರದಲ್ಲಿ ಮೇಲೆ ತಿಳಿಸಿದ ಆರ್ಥಿಕ ವರ್ಷಕ್ಕೆ ಈ ಕೆಳಕಂಡಂತೆ ನಾನು ದೃಢೀಕರಿಸುತ್ತೇನೆ.

1. ಕಂಪನಿಯು ಈ ದೃಢೀಕರಣ ಪತ್ರಕ್ಕೆ ಲಗತ್ತಿಸಿರುವ ಅನುಬಂಧ 'ಎ'ನಲ್ಲಿರುವ ಎಲ್ಲ ರಿಜಿಸ್ಟರ್‌ಗಳನ್ನು ಇಟ್ಟಿದ್ದು, ಅವು ಆ ತತ್ಸಂಬಂಧಿತ ಕಾನೂನುಗಳಿಗನುಗುಣವಾಗಿದ್ದು, ಅವುಗಳಲ್ಲಿ ಎಲ್ಲ ದಾಖಲೆಗಳನ್ನು ನಮೂದಿಸಲಾಗಿದೆ.

2. ಕಂಪನಿಯು ಈ ದೃಢೀಕರಣ ಪತ್ರಕ್ಕೆ ಲಗತ್ತಿಸಿರುವ ಅನುಬಂಧ 'ಬಿ' ನಲ್ಲಿ ನಮೂದಿಸಿದ ಫಾರಂಗಳು ಮತ್ತು ವರದಿಗಳನ್ನು ಕಂಪನಿಗಳ ರಿಜಿಸ್ಟ್ರಾರ್ ರವರಿಗೆ, ಪ್ರಾಂತೀಯ ನಿರ್ದೇಶಕರಿಗೆ, ಕೇಂದ್ರ ಸರ್ಕಾರಕ್ಕೆ, ಕಂಪನಿ ಕಾನೂನು ಮಂಡಳಿಗೆ, ಅಥವಾ ಇತರ ಅಧಿಕಾರಿಗಳಿಗೆ ಕಾಯ್ದೆ ಮತ್ತು ತತ್ಸಂಬಂಧಿತ ನಿಯಮಾವಳಿಗಳಲ್ಲಿ ನಿಗದಿ ಪಡಿಸಿರುವ ಸಮಯದೊಳಗೆ ಸಲ್ಲಿಸಿರುತ್ತದೆ. (ತಡವಾದ್ದಕ್ಕೆ ಹೆಚ್ಚಿನ ಶುಲ್ಕಸಹಿತ)

3. ಕಂಪನಿಯು ಸಾರ್ವಜನಿಕ ಕಂಪನಿಯಾದ್ದರಿಂದ ಕಂಪನಿ ಕಾಯ್ದೆ 1956ರ ಪ್ರಕಾರ ಕನಿಷ್ಟ ಪಾವತಿಸಲಾದ ಬಂಡವಾಳವನ್ನು ಹೊಂದಿದೆ ಮತ್ತು ಕಂಪನಿ ಕಾಯಿದೆಯು ಅಂತಹ ಸಾರ್ವಜನಿಕ ಕಂಪನಿಗೆ ಗರಿಷ್ಠ ಸಂಖ್ಯೆಯ ಸದಸ್ಯರನ್ನು ನಿಗದಿಪಡಿಸಿರುವುದಿಲ್ಲ. ಕಂಪನಿಯು ಕಾಯ್ದೆ 1956ರ ಸೆಕ್ಷನ್ 617ರಲ್ಲಿನ ಅರ್ಥದಂತೆ "ಸರ್ಕಾರಿ ಕಂಪನಿ" ಯಾಗಿರುತ್ತದೆ.

4. ಮಂಡಳಿಯ ನಿರ್ದೇಶಕರು ದಿನಾಂಕ 1–4–2013 ರಿಂದ 31–3–2014ರವರೆಗೆ ದಿನಾಂಕ 26–6–2013, 08–8–2013, 28–9–2013, 19–12–2013, ಮತ್ತು 06–2–2014ರಂದು, 5 (ಐದು) ಬಾರಿ ಸಭೆ ಸೇರಿದ್ದು, ಸದರಿ ಸಭೆಗಳ ಕ್ರಮಬದ್ಧವಾದ ಮೀಟಿಂಗ್, ನೋಟೀಸ್‌ಗಳನ್ನು ಕಳುಹಿಸಿದ್ದು, ಸಭಾ ನಡವಳಿಕೆಗಳನ್ನು ಕ್ರಮವಾಗಿ ದಾಖಲಿಸಿದ್ದು, ಅದಕ್ಕಾಗಿ ಇಡಲಾದ ಮಿನಿಟ್ಸ್ ಪುಸ್ತಕದಲ್ಲಿ ಸಹಿಮಾಡಿರುತ್ತಾರೆ.

5. ದಿನಾಂಕ 31–3–2013ಕ್ಕೆ ಅಂತ್ಯವಾದ ಹಣಕಾಸು ವರ್ಷದ ಸರ್ವ ಸದಸ್ಯರ ಸಭೆಯನ್ನು ದಿನಾಂಕ 28–08–2013ರಂದು ನಡೆಸಲಾಗಿದೆ. ಸದರಿ ಸಭೆಗೆ ಸದಸ್ಯರಿಗೆ ಕ್ರಮವಾದ ಮೀಟಿಂಗ್ ನೋಟೀಸ್‌ಗಳನ್ನು ಕಳುಹಿಸಲಾಗಿತ್ತು ಮತ್ತು ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳನ್ನು ಅದಕ್ಕಾಗಿ ಇಡಲಾದ ಮಿನಿಟ್ಸ್ ಪುಸ್ತಕದಲ್ಲಿ ಕ್ರಮವಾಗಿ ನಮೂದಿಸಲಾಗಿದೆ.

6. ಹಣಕಾಸಿನ ವರ್ಷದಲ್ಲಿ ಸರ್ವ ಸದಸ್ಯರ ವಿಶೇಷ ಸಭೆಯನ್ನು ನಡೆಸಿರುವುದಿಲ್ಲ.

7. ನಮಗೆ ನೀಡಿದ ವಿವರಣೆಗಳಿಗನುಗುಣವಾಗಿ ನಿರ್ದೇಶಕರಿಗೆ ಯಾವುದೇ ಸಾಲವನ್ನು ನೀಡಿಲ್ಲ ಮತ್ತು ಹಾಗಾಗಿ ಕಂಪನಿ ಕಾಯಿದೆ 1956ರ ಸೆಕ್ಷನ್ 295/ಕಂಪನಿ ಕಾಯಿದೆ 2013ರ ಸೆಕ್ಷನ್ 185 ಕಂಪನಿಗೆ ಅನ್ವಯವಾಗುವುದಿಲ್ಲ.

8. ಕಂಪನಿ ಕಾಯ್ದೆ ಸೆಕ್ಷನ್ 297ರಲ್ಲಿನ ನಿಯಮಗಳ ಅಧೀನದಲ್ಲಿ ಬರುವ ಯಾವುದೇ ಗುತ್ತಿಗೆ ಒಪ್ಪಂದ ಮಾಡಿಕೊಂಡಿರುವುದಿಲ್ಲ.

9. ಕಂಪನಿ ಕಾಯ್ದೆ 301ರಡಿಯಲ್ಲಿ ಇಟ್ಟಿರುವ ರಿಜಿಸ್ಟರ್‌ನಲ್ಲಿ ಕಂಪನಿಯ ದಾಖಲೆಗಳನ್ನು ಬರೆಯುವ ಅಗತ್ಯವಿರಲಿಲ್ಲ.

10. ಯಾವುದೇ ಪ್ರಸಂಗವು ಕಂಪನಿ ಕಾಯ್ದೆ 1956ರ ಸೆಕ್ಷನ್ 314ರ ಅಡಿಯಲ್ಲಿ ಬರುವುದಿಲ್ಲವಾದುದರಿಂದ, ಕಂಪನಿಯು ನಿರ್ದೇಶಕರ ಮಂಡಳಿಯಿಂದ, ಸದಸ್ಯರುಗಳಿಂದ ಅಥವಾ ಕೇಂದ್ರ ಸರ್ಕಾರದಿಂದ ಯಾವುದೇ ಅನುಮೋದನೆಯನ್ನು ಪಡೆದುಕೊಂಡಿರುವುದಿಲ್ಲ.

11. ಹಣಕಾಸು ವರ್ಷದಲ್ಲಿ ಕಂಪನಿಯು ಯಾವುದೇ ನಕಲು ಷೇರು ಸರ್ಟಿಫಿಕೇಟುಗಳನ್ನು ನೀಡಿರುವುದಿಲ್ಲ.

12. ಕಂಪನಿಯು :

    (i) ಹಣಕಾಸು ವರ್ಷದಲ್ಲಿ ಷೇರು ವರ್ಗಾವಣೆಯನ್ನೂ ಮಾಡಿರುತ್ತದೆ.

    (ii) ಹಣಕಾಸು ವರ್ಷದಲ್ಲಿ ಲಾಭಾಂಶವನ್ನು ಘೋಷಿಸಿದೆ.

    (ii) 31ನೇ ಮಾರ್ಚ್ 2013 ಅಂತ್ಯಗೊಂಡ ಹಣಕಾಸು ವರ್ಷಕ್ಕೆ ಘೋಷಿಸಿದ ಲಾಭಾಂಶವನ್ನು ಪಾವತಿಸಿದೆ ಮತ್ತು ಎಲ್ಲಾ ಪಾವತಿಯಾಗದ/ಸ್ವೀಕರಿಸಿಲ್ಲದ ಲಾಭಾಂಶವನ್ನು ಕಾನೂನು ರೀತಿಯ ಕಂಪನಿಯು "ಪಾವತಿಯಾಗದ ಲಾಭಾಂಶ" ಖಾತೆಗೆ ವರ್ಗಾಯಿಸಿದೆ.

    (iv) ಹೂಡಿಕೆದಾರರ ಶಿಕ್ಷಣ ಮತ್ತು ರಕ್ಷಣಾ ನಿಧಿಗೆ ಅಗತ್ಯವಾದ ಹಣವನ್ನು ಪ್ರಸ್ತುತ ವರ್ಷದಲ್ಲಿ ವರ್ಗಾಯಿಸಲಾಗಿದೆ.

    (iii) ಕಂಪನಿ ಕಾಯ್ದೆ ಸೆಕ್ಷನ್ 217ರಡಿಯಲ್ಲಿ ಮಾಡಬೇಕಾದ್ದನ್ನು ಯಥೋಚಿತವಾಗಿ ಮಾಡಿದೆ.

13. ಈ ವರ್ಷದಲ್ಲಿ ನಿರ್ದೇಶಕರ ಮಂಡಳಿಯಲ್ಲಿ ಬದಲಾವಣೆಗಳಾಗಿದ್ದವು ಮತ್ತು ಅವಶ್ಯಕವಿರುವ ದಾಖಲೆಗಳನ್ನು ಕಂಪನಿಗಳ ರಿಜಿಸ್ಟ್ರಾರ್ ರವರಲ್ಲಿ ದಾಖಲಿಸಲಾಗಿದೆ.

14. ಕಂಪನಿಯ ನಿರ್ದೇಶಕರ ಮಂಡಳಿಯನ್ನು ಯಥೋಚಿತವಾಗಿ ರಚಿಸಲಾಗಿದೆ.

15. ಕಂಪನಿಯ ಹಣಕಾಸಿನ ವರ್ಷದಲ್ಲಿ ವ್ಯವಸ್ಥಾಪಕ ನಿರ್ದೇಶಕರನ್ನು ನೇಮಿಸಿಲ್ಲ.

16. ಕಂಪನಿಯ ಹಣಕಾಸಿನ ವರ್ಷದಲ್ಲಿ ಏಕಮಾತ್ರ ಮಾರಾಟ ಪ್ರತಿನಿಧಿಗಳನ್ನು ನೇಮಿಸಿಲ್ಲ.

17. ಹಣಕಾಸಿನ ವರ್ಷದಲ್ಲಿ ಕಂಪನಿ ಕೇಂದ್ರ ಸರ್ಕಾರ, ಕಂಪನಿ ಕಾನೂನು ಮಂಡಳಿ, ಪ್ರಾದೇಶಿಕ ನಿರ್ದೇಶಕರು, ಮತ್ತು / ಅಥವಾ ಯಾವುದೇ ಅಂತಹ ಅಧಿಕಾರಿಗಳಿಂದ, ಕಾಯ್ದೆಯ ವಿವಿಧ ನಿಯಮಗಳಡಿಯಲ್ಲಿ ಯಾವುದೇ ಅನುಮೋದನೆ ಪಡೆದುಕೊಳ್ಳುವ ಅಗತ್ಯವಿರಲಿಲ್ಲ.

18. ನಿರ್ದೇಶಕರುಗಳು ಬೇರೆ ಸಂಸ್ಥೆಗಳು/ಕಂಪನಿಗಳಲ್ಲಿ ತಮಗಿರುವ ಆಸಕ್ತಿಯನ್ನು ನಿರ್ದೇಶಕರ ಮಂಡಳಿಗೆ, ಕಾಯ್ದೆ ಮತ್ತು ಆ ತತ್ಸಂಬಂಧಿತ ನಿಯಮಗಳ ಪ್ರಕಾರ, ಬಹಿರಂಗಪಡಿಸಿರುತ್ತಾರೆ.

19. ಹಣಕಾಸಿನ ವರ್ಷದಲ್ಲಿ ಕಂಪನಿಯು ಯಾವುದೇ ಈಕ್ವಿಟಿ ಷೇರುಗಳನ್ನು ಡಿಬೆಂಚರ್‌ಗಳನ್ನು ಅಥವಾ ಯಾವುದೇ ಬೇರೆ ಭದ್ರತೆಗಳನ್ನು ನೀಡಿರುವುದಿಲ್ಲ.

20. ಹಣಕಾಸಿನ ವರ್ಷದಲ್ಲಿ ಕಂಪನಿಯು ಯಾವುದೇ ಪ್ರಾಶಸ್ತ್ಯ ಷೇರುಪತ್ರಗಳನ್ನು ಬಿಡುಗಡೆ ಮಾಡಿಲ್ಲ.
21. ಹಣಕಾಸಿನ ವರ್ಷದಲ್ಲಿ ಕಂಪನಿಯು ಯಾವುದೇ ಷೇರುಗಳನ್ನು ಮರು ಖರೀದಿಸಿಲ್ಲ.
22. ಹಣಕಾಸಿನ ವರ್ಷದಲ್ಲಿ ಕಂಪನಿಯು ಯಾವುದೇ ಪ್ರಾಶಸ್ತ್ಯ ಷೇರುಪತ್ರಗಳನ್ನು ಅಥವಾ ಡಿಬೆಂಚರ್‌ಗಳನ್ನು ವಿಮೋಚನೆ ಮಾಡಿರುವುದಿಲ್ಲ.
23. ಷೇರುಗಳ ವರ್ಗಾವಣೆಯ ದಾಖಲಾತಿ ಬಾಕಿಯಿರುವಾಗ ಲಾಭಾಂಶ ಹಕ್ಕು, ಹಕ್ಕಿನ ಷೇರುಗಳು, ಮತ್ತು ಬೋನಸ್ ಷೇರುಗಳನ್ನು ತಡೆ ಹಿಡಿಯುವಂತಹ ಯಾವುದೇ ವಹಿವಾಟು ನಡೆದಿರುವುದಿಲ್ಲ.
24. ಹಣಕಾಸಿನ ವರ್ಷದಲ್ಲಿ ಕಂಪನಿಯು ಯಾವುದೇ ಠೇವಣಿಗಳನ್ನು ಅಸುರಕ್ಷಿತ ಸಾಲಗಳನ್ನು ಸೆಕ್ಷನ್ 58ಎ ವ್ಯಾಪ್ತಿಯಲ್ಲಿ ಬರುವಂತೆ, ಆಹ್ವಾನಿಸಿರುವುದಿಲ್ಲ/ಅಂಗೀಕರಿಸಿರುವುದಿಲ್ಲ.
25. ದಿನಾಂಕ 31–3–2014ಕ್ಕೆ ಅಂತ್ಯವಾದ ಆರ್ಥಿಕ ವರ್ಷದಲ್ಲಿ ಕಂಪನಿಯು ಪಡೆದ ಸಾಲಗಳು ಕಾಯ್ದೆಯನುಸಾರವಾಗಿದೆ.
26. ಕಂಪನಿಯು ಯಾವುದೇ ಸಾಲಗಳನ್ನು/ಮುಂಗಡಗಳನ್ನು ಅಥವಾ ಜಾಮೀನುಗಳನ್ನು, ಬೇರೆ ಕಾರ್ಪೋರೇಟ್ ನಿಕಾಯಗಳಿಗೆ ಭದ್ರತೆ ನೀಡಿರುವುದಿಲ್ಲ, ಅದರ ಫಲವಾಗಿ ಅದಕ್ಕಾಗಿ ಇಟ್ಟಿರುವ ರಿಜಿಸ್ಟರ್‌ನಲ್ಲಿ ದಾಖಲೆಗಳನ್ನು ಬರೆದಿರುವುದಿಲ್ಲ.
27. ಪರಿಶೀಲನಾ ವರ್ಷದಲ್ಲಿ ಕಂಪನಿಯು ತನ್ನ ಮೆಮೊರಾಂಡಮ್ ಆಫ್ ಅಸೋಸಿಯೇಷನ್‌ನಲ್ಲಿ, ತನ್ನ ನೊಂದಾಯಿತ ಕಛೇರಿಯ ಇರುವಿಕೆಯ ಸ್ಥಳದಲ್ಲಿ ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಬಗೆಗಿನ ಯಾವುದೇ ನಿಯಮಗಳನ್ನು ಬದಲಾಯಿಸಿರುವುದಿಲ್ಲ.
28. ಪರಿಶೀಲನಾ ವರ್ಷದಲ್ಲಿ ಕಂಪನಿಯ ಉದ್ದೇಶಗಳಿಗೆ ಸಂಬಂಧಪಟ್ಟಂತೆ ಮೆಮೊರಾಂಡಮ್‌ನ ಯಾವುದೇ ನಿಯಮವನ್ನು ಮಾರ್ಪಡಿಸಿರುವುದಿಲ್ಲ.
29. ಪರಿಶೀಲನೆಯ ವರ್ಷದಲ್ಲಿ ಕಂಪನಿಯು ತನ್ನ ಕಂಪನಿಯ ಹೆಸರಿನ ಬಗ್ಗೆ ಮೆಮೋರಾಂಡಮ್‌ನಲ್ಲಿನ ನಿಯಮಗಳನ್ನು ಮಾರ್ಪಡಿಸಿರುವುದಿಲ್ಲ.
30. ಪರಿಶೀಲನೆಯ ವರ್ಷದಲ್ಲಿ ಕಂಪನಿಯ ತನ್ನ ಷೇರು ಬಂಡವಾಳದ ಬಗೆಗೆ ಮೆಮೋರಾಂಡಮ್‌ನಲ್ಲಿಯ ಯಾವುದೇ ನಿಯಮಗಳನ್ನು ಬದಲಾಯಿಸಿರುವುದಿಲ್ಲ.
31. ಪ್ರಸ್ತುತ ಹಣಕಾಸು ವರ್ಷದಲ್ಲಿ ಕಂಪನಿಯು ತನ್ನ ಸಂಸ್ಥಾ–ಅಂತರ್ನಿಯಮಾವಳಿಗಳಲ್ಲಿ ಯಾವುದೇ ಬದಲಾವಣೆಯನ್ನು ಮಾಡಿರುವುದಿಲ್ಲ.
32. ಹಣಕಾಸು ವರ್ಷದಲ್ಲಿ ಶಿಕ್ಷೆಗೆ ಗುರಿಪಡಿಸಿದ್ದಾಗಲೀ, ಕಾರಣ ಕೇಳಿ ನೋಟೀಸ್‌ಗಳನ್ನಾಗಲೀ ಕಂಪನಿಯು ಸ್ವೀಕರಿಸಿಲ್ಲ ಮತ್ತು ದಂಡ ಅಥವಾ ಜುಲ್ಮಾನೆ ಅಥವಾ ಕಾಯ್ದೆಯಡಿಯಲ್ಲಿನ ಅಪರಾಧಗಳಿಗೆ ಕಂಪನಿಗೆ ಬೇರಾವುದೇ ಶಿಕ್ಷೆಯನ್ನು ವಿಧಿಸಿರುವುದಿಲ್ಲ.
33. ಹಣಕಾಸು ವರ್ಷದಲ್ಲಿ ಕಂಪನಿಯು ತನ್ನ ಉದ್ಯೋಗಿಗಳಿಂದ ಯಾವುದೇ ಹಣವನ್ನು ಭದ್ರತಾ ಠೇವಣಿಯಾಗಿ ಸ್ವೀಕರಿಸಿರುವುದಿಲ್ಲ.
34. ಕಂಪನಿಯು ತನ್ನ ಸಿಬ್ಬಂದಿಯ ಮತ್ತು ತನ್ನ ವಂತಿಗೆಗಳನ್ನು ಸರ್ಕಾರದ ಭವಿಷ್ಯ ನಿಧಿ ಲೆಕ್ಕಕ್ಕೆ ಜಮಾ ಮಾಡಿರುವುದರಿಂದ, ಕಾಯ್ದೆಯ ಸೆಕ್ಷನ್ 418 ಅನ್ವಯವಾಗುವುದಿಲ್ಲ.

ಸಹಿ/–

ವಿಜಯಕೃಷ್ಣ ಕೆ.ಟಿ.

ಬೆಂಗಳೂರು

ದಿನಾಂಕ : 08–08–2014

ಅನುಬಂಧ ಎ

1. ಷೇರು ಹಂಚಿಕಾ ರಿಜಿಸ್ಟರ್
2. ನಿರ್ದೇಶಕರ ರಿಜಿಸ್ಟರ್
3. ಸದಸ್ಯರ ರಿಜಿಸ್ಟರ್
4. ಆಸಕ್ತಿಗಳ ಬಹಿರಂಗ ರಿಜಿಸ್ಟರ್
5. ಷೇರು ವರ್ಗಾವಣೆ ರಿಜಿಸ್ಟರ್
6. ನಿರ್ದೇಶಕರುಗಳು ಷೇರು ಮಾಲೀಕತ್ವದ ರಿಜಿಸ್ಟರ್
7. ಅಸ್ತಿಗಳ ಪಾರುಪತ್ಯ ರಿಜಿಸ್ಟರ್
8. ಗುತ್ತಿಗೆಗಳ ರಿಜಿಸ್ಟರ್
9. ನಿರ್ದೇಶಕರ ಮಂಡಳಿಯ ಮತ್ತು ಷೇರುದಾರರ ಸಭೆಗಳ ನಡಾವಳಿಗಳ ರಿಜಿಸ್ಟರ್

ಅನುಬಂಧ ಬಿ

ದಿನಾಂಕ 31 ಮಾರ್ಚಿ 2014ಕ್ಕೆ ಅಂತ್ಯಗೊಂಡ ಹಣಕಾಸಿನ ವರ್ಷದಲ್ಲಿ ಕಂಪನಿಗಳ ರಿಜಿಸ್ಟ್ರಾರ್, ಪ್ರಾದೇಶಿಕ ನಿರ್ದೇಶಕರು, ಕೇಂದ್ರ ಸರ್ಕಾರ ಅಥವಾ ಇತರೆ ಅಧಿಕಾರಿಗಳಲ್ಲಿ ಕಂಪನಿಯು ದಾಖಲಿಸಿದ ಫಾರ್ಮ್‌ಗಳು ಮತ್ತು ದಾಖಲೆಗಳು.

ಕ್ರಮ ಸಂ.	ಫಾರ್ಮ್ ಸಂಖ್ಯೆ/ ದಾಖಲೆ	ಯಾವ ಸೆಕ್ಷನ್ ಅಡಿಯಲ್ಲಿ	ಉದ್ದೇಶ	ದಾಖಲಿಸಿದ ದಿನಾಂಕ	ನಿಗದಿತ ಕಾಲಮಿತಿಯೊಳಗೇ ದಾಖಲಿಸಿದೆಯೋ? ಹೌದು/ಇಲ್ಲ	ತಡವಾಗಿದ್ದರೆ, ಹೆಚ್ಚುವರಿ ಶುಲ್ಕಗಳನ್ನು ಪಾವತಿಸಿದೆಯೇ ಹೌದು/ಇಲ್ಲ
1.	ಫಾರಂ 20ಬಿ	159	ವಾರ್ಷಿಕ ವರದಿ	22.11.2013	ಹೌದು	ಇಲ್ಲ
2.	ಫಾರಂ 23ಎಸಿ ಮತ್ತು 23ಂಎಸಿಎ –ಎಕ್ಸ್‌ಬಿಆರ್‌ಎಲ್	220	ವಾರ್ಷಿಕ ಲೆಕ್ಕಪತ್ರಗಳು	22.10.2013	ಹೌದು	ಇಲ್ಲ
3.	ಫಾರಂ 32	303(2)	ನಿರ್ದೇಶಕರಲ್ಲಿನ ಬದಲಾವಣೆ	06.07.2013	ಇಲ್ಲ	ಹೌದು
4.	ಫಾರಂ 32	303(2)	ನಿರ್ದೇಶಕರಲ್ಲಿನ ಬದಲಾವಣೆ	09.07.2013	ಹೌದು	ಇಲ್ಲ
5.	ಫಾರಂ 32	303(2)	ನಿರ್ದೇಶಕರಲ್ಲಿನ ಬದಲಾವಣೆ	24.09.2013	ಹೌದು	ಇಲ್ಲ

6.	ಫಾರಂ 32	303(2)	ನಿರ್ದೇಶಕರಲ್ಲಿನ ಬದಲಾವಣೆ	24.09.2013	ಹೌದು	ಇಲ್ಲ
7.	ಫಾರಂ 23ಸಿ	233B(2)	ಕಾಸ್ಟ್ ಅಡಿಟರ್‌ರವರ ನೇಮಕಾತಿಗೆ ಕೇಂದ್ರಸರ್ಕಾರಕ್ಕೆ	28.06.2013	ಹೌದು	ಇಲ್ಲ
8.	ಫಾರಂ 66	383A	ಸೆಕ್ರೆಟೇರಿಯಲ್ ದೃಢೀಕರಣ ಪತ್ರ	19.10.2013	ಹೌದು	ಇಲ್ಲ
9.	ಫಾರಂ ಐ– ಎಕ್ಸ್‌ಬಿಆರ್‌ಎಲ್	233B(4) 600(3)(b),	ಕಾಸ್ಟ್ ಅಡಿಟ್ ರಿಪೋರ್ಟ್	3.02.2014	ಹೌದು	ಇಲ್ಲ
10.	ಫಾರಂ 32	303(2),	ನಿರ್ದೇಶಕರ ಬದಲಾವಣೆ	19.10.2013	ಹೌದು	ಇಲ್ಲ
11.	ಫಾರಂ 32	303(2),	ನಿರ್ದೇಶಕರ ಬದಲಾವಣೆ	29.11.2013	ಇಲ್ಲ	ಹೌದು

ಸುಭಾಶ್‌ಚಂದ್ರ ಪಿ. ಕುದರಿ & ಕಂ.
ಛಾರ್ಟರ್ಡ್ ಅಕೌಂಟೆಂಟ್ಸ್

ನಂ. 15, 1ನೇ ಮಹಡಿ, 1ನೇ ಅಡ್ಡರಸ್ತೆ, ನೆಹರುನಗರ
ಶೇಷಾದ್ರಿಪುರಂ, ಬೆಂಗಳೂರು–560 020
ದೂರವಾಣಿ : 080–23564975/23564976

ಸ್ವತಂತ್ರ ಲೆಕ್ಕ ಪರಿಶೋಧಕರ ವರದಿ (ಪರಿಷ್ಕೃತ)
ದಿ ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತದ ಸದಸ್ಯರಿಗೆ

31ನೇ ಮಾರ್ಚ್ 2014ರಂದು ಅಂತ್ಯಗೊಂಡ ವರ್ಷದ ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತದ ಲೆಕ್ಕ ಪತ್ರಗಳ ಪರಿಶೋಧನಾ ಕಾರ್ಯವು ಪೂರ್ಣಗೊಂಡ ನಂತರ ನಾವು ಲೆಕ್ಕ ಪರಿಶೋಧನಾ ವರದಿಯನ್ನು ತಾ. 5–8–2014ರಲ್ಲಿ ನೀಡಿದ್ದೇವೆ. ನಮ್ಮ ವರದಿಯ ನಂತರ ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್‌ರವರು ಮಾಡಿದ ಅವಲೋಕನಗಳ ಬೆಳಕಿನಲ್ಲಿ ಆ ವರದಿಯನ್ನು ಪ್ಯಾರಾ (ಎ), (ಸಿ) ಮತ್ತು (ಇ)ಯಲ್ಲಿ ಒತ್ತು ನೀಡುವ ಭಾಗದಲ್ಲಿ ತೋರಿಸಿದ ವಿಷಯಗಳ ಬಗೆಗೆ ಪರಿಷ್ಕರಿಸಲಾಗಿದೆ. ಈ ವರದಿಯು ನಮ್ಮ ಹಿಂದಿನ ವರದಿಯನ್ನು ರದ್ದುಗೊಳಿಸುತ್ತದೆ.

ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗಳ ಮೇಲಿನ ವರದಿ

ಸ್ಥಿತಿ ವಿವರಣಾ ಪಟ್ಟಿ, ಲಾಭ ನಷ್ಟದ ತಪ್ಸೀಲು, ಹಣದ ಹರಿವಿನ ತಪ್ಸೀಲು ಮತ್ತು ಲಕ್ಕಾಚಾರಶಾಸ್ತ್ರಗಳ ಪ್ರಮುಖ ನೀತಿಗಳು ಮತ್ತು ಇತರೆ ವಿವರಣಾದಾಯಕ ಮಾಹಿತಿಗಳನ್ನೊಳಗೊಂಡ 31ನೇ ಮಾರ್ಚ್ 2014ರಂದು ಅಂತ್ಯಗೊಂಡ ವರ್ಷದ ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗಳನ್ನು ನಾವು ಪರಿಶೋಧಿಸಿದ್ದೇವೆ.

ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗಳ ಬಗೆಗೆ ಆಡಳಿತ ವರ್ಗಗಳ ಜವಾಬ್ದಾರಿ

ಕಂಪನಿ ಕಾಯಿದೆ 1956ರ ಸೆಕ್ಷನ್ 211(3)(ಸಿ)ರೊಂದಿಗೆ ಕಂಪನಿ ಕಾಯಿದೆ 2013ರ ಸೆಕ್ಷನ್ 133ರ ಬಗೆಗೆ ಕಂಪನಿಗಳ ವ್ಯವಹಾರ ಮಂತ್ರಾಲಯವು ಹೊರಡಿಸಿದ ತಾ. 13–9–2013ರ ಸಾಮಾನ್ಯ ಸುತ್ತೋಲೆ ಸಂ. 15/2013ರಲ್ಲಿ ಹೆಸರಿಸಲಾದ ಲೆಕ್ಕಾಚಾರದ ನೀತಿಗಳಿಗನುಸಾರವಾಗಿ ಆರ್ಥಿಕ ಸ್ಥಿತಿಗತಿಗಳು, ಆರ್ಥಿಕ ನಿರ್ವಹಣೆ ಮತ್ತು ಹಣದ ಹರಿವಿನ ಬಗೆಗೆ ನೈಜ ಮತ್ತು ನ್ಯಾಯೋಚಿತವಾದ ನೋಟವನ್ನು ಕೊಡುವ ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗಳ ತಯಾರಿಕೆ ಆಡಳಿತ ವರ್ಗದ ಜವಾಬ್ದಾರಿಯಾಗಿರುತ್ತದೆ. ಈ ಜವಾಬ್ದಾರಿಯಲ್ಲಿ, ವಂಚನೆ ಅಥವಾ ತಪ್ಪು ಹೇಳಿಕೆಗಳಿಂದ ಉಂಟಾದ ಗಣ್ಯ ತಪ್ಪುಗಳಿಂದ ಹೊರತಾದ ನೈಜ ಮತ್ತು ನ್ಯಾಯೋಚಿತ ನೋಟವನ್ನು ನೀಡುವ ಸ್ಥಿತಿ ವಿವರಣಾ ಪಟ್ಟಿಗಳಿಗೆ ಅವಶ್ಯಕವಾದ ಆಂತರಿಕ ನಿಯಂತ್ರಣಗಳ ವಿನ್ಯಾಸ, ಅಳವಡಿಕೆ ಮತ್ತು ಅವುಗಳ ನಿರ್ವಹಣೆಯೂ ಸೇರಿರುತ್ತದೆ.

ಲೆಕ್ಕ ಪರಿಶೋಧಕರ ಜವಾಬ್ದಾರಿ

ನಮ್ಮ ಲೆಕ್ಕ ಪರಿಶೋಧನೆಯನ್ನು ಆಧರಿಸಿ ಈ ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗಳ ಮೇಲೆ ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವುದು ನಮ್ಮ ಜವಾಬ್ದಾರಿ, ಇನ್ಸ್‌ಟಿಟ್ಯೂಟ್ ಆಫ್ ಛಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾರವರು ಪ್ರಕಟಿಸಿದ ಪರಿಶೋಧನಾ ಮಾನದಂಡಗಳಿಗನುಸಾರವಾಗಿ ನಾವು ಪರಿಶೋಧನೆಯನ್ನು ನಡೆಸಿದ್ದೇವೆ. ಈ ಮಾನದಂಡಗಳು, ನಾವು ನೈತಿಕ ಅವಶ್ಯಕತೆಗಳಿಗನುಸಾರವಾಗಿ ನಮ್ಮ ಪರಿಶೋಧನೆಯನ್ನು ಯೋಜಿಸಿಕೊಂಡು ಹಾಗೂ ನಡೆಸಿ, ಲೆಕ್ಕಪತ್ರಗಳು, ಗಣ್ಯ ಅಪಹೇಳಿಕೆಗಳಿಂದ ಮುಕ್ತವಾಗಿವೆ ಎಂಬ ಆಶ್ವಾಸನೆಯನ್ನು ಪಡೆಯುವ ಅವಶ್ಯಕತೆಯನ್ನು ಹೇಳಿವೆ.

ಒಂದು ಪರಿಶೋಧನೆಯು, ಲೆಕ್ಕಪತ್ರಗಳಲ್ಲಿನ ಮೊಬಲಗು ಮತ್ತು ಪ್ರಕಟಣೆಗೆ ಸಂಬಂಧಿಸಿದಂತೆ ನಿರ್ವಹಣಾ ಪ್ರಕ್ರಿಯೆಗಳಲ್ಲಿ, ಪರಿಶೋಧನಾ ಪುರಾವೆಗಳನ್ನು ಒಳಗೊಂಡಿರುತ್ತದೆ. ವಂಚನೆ ಅಥವಾ ತಪ್ಪುಗಳಿಂದಾಗಿ ಆಗಬಹುದಾದ ಗಣ್ಯ ಅಪಹೇಳಿಕೆಗಳಿಂದಾಗಿ ಉಂಟಾಗಬಹುದಾದ ಅಪಾಯಗಳನ್ನು ಒಳಗೊಂಡಂತೆ, ಈ ಪ್ರಕ್ರಿಯೆಗಳ ಆಯ್ಕೆಯು ಪರಿಶೋಧಕರ ವಿವೇಚನೆಯ ಮೇಲೆ ಆಧಾರಿತವಾಗಿದೆ. ಈ ಅಪಾಯಗಳನ್ನು ನಿರ್ಧರಿಸುವಾಗ, ಲೆಕ್ಕ ಪರಿಶೋಧಕರು, ಕಂಪನಿಯ ಲೆಕ್ಕಪತ್ರಗಳು ನೈಜ ಮತ್ತು ನ್ಯಾಯಯುತವಾದ ಪ್ರದರ್ಶನ ನೀಡುತ್ತವೆ ಎಂಬುದನ್ನು ಮನಗಾಣುತ್ತಾರೆ. ಲೆಕ್ಕ ಪರಿಶೋಧನೆಯು, ಆಡಳಿತ ವರ್ಗವು ಬಳಸಿಕೊಂಡ ಲೆಕ್ಕಾಚಾರ ನೀತಿಗಳ ಬಳಕೆ ಮತ್ತು ಅವುಗಳ ಬಳಕೆಗಳ ಯಕ್ತಾಯುಕ್ತತೆಗಳ ಬಗೆಗಿನ ಮೌಲ್ಯೀಕರಣವನ್ನೂ ಒಳಗೊಂಡಿರುತ್ತದೆ.

ನಮ್ಮ ಪರಿಶೋಧನಾ ಅಭಿಪ್ರಾಯಗಳಿಗಾಗಿ, ನಾವು ಪಡೆದಿರುವ ಪರಿಶೋಧನಾ ಪುರಾವೆಗಳು ಸಾಕಷ್ಟಿದ್ದು ಮತ್ತು ಸೂಕ್ತವಾಗಿವೆ ಎಂದು ನಾವು ನಂಬುತ್ತೇವೆ.

ಷರತ್ತುಬದ್ಧ ಅಭಿಪ್ರಾಯದ ಆಧಾರ :

ಈ ಕೆಳಕಂಡವುಗಳೆಡೆಗೆ ಗಮನವನ್ನು ಸೆಳೆಯಲಾಗಿದೆ.

ಎ. ಲೆಕ್ಕಪತ್ರಗಳ ಮೇಲಿನ ಟಿಪ್ಪಣಿ ಸಂಖ್ಯೆ 28–II–3 ರಲ್ಲಿ ಹೇಳಿರುವ 2008–09, 2009–10, 2010–11, 2012–13 ಮತ್ತು 2013–14 ನೇ ವರ್ಷಗಳಿಗೆ ಅನುಗ್ರಹ (ಎಕ್ಸ್‌ಗ್ರೇಷಿಯಾ) ಪಾವತಿಗಾಗಿ, ಸರ್ಕಾರದ ಅನುಮೋದನೆಯನ್ನು ಕಾಯ್ದಿರಿಸಿ ಒಟ್ಟು 1235.54 ಲಕ್ಷ ರೂ.ಗಳನ್ನು ಮುನ್ನೇರ್ಪಾಡುಗಳನ್ನು ಮಾಡಿರುವುದು ಮತ್ತು ಉತ್ಪಾದನಾ ಸಂಬಂಧಿತ ಬಹುಮಾನದೆಡೆಗೆ 2011–12ನೇ ವರ್ಷಕ್ಕೆ ರೂ. 451.62 ಲಕ್ಷ ರೂ.ಗಳ ಮುನ್ನೇರ್ಪಾಡನ್ನು ಮಾಡಿರುವುದು.

ಮೇಲ್ಕಂಡ ಅನುಗ್ರಹ (ಎಕ್ಸ್‌ಗ್ರೇಷಿಯಾ) ಪಾವತಿಗಾಗಿ, ಮತ್ತು ಉತ್ಪಾದನಾ ಸಂಬಂಧಿತ ಬಹುಮಾನಗಳೆಡೆಗಿನ ಏರ್ಪಾಡುಗಳಿಗೆ ಸರ್ಕಾರದ ಅನುಮೋದನೆಯನ್ನು ಪಡೆಯಬೇಕಿದೆ. ಆದಾಗ್ಯೂ ಸಂಬಂಧಿತ ಅಧಿಕಾರಿಗಳಿಂದ ಅನುಮೋದನೆಯನ್ನು ಪಡೆಯಲಾಗಿಲ್ಲ.

ಈ ಸನ್ನಿವೇಶದಲ್ಲಿ ಕಂಪನಿಯ ಆರ್ಥಿಕ ಸ್ಥಿತಿವಿವರಣಾ ಪಟ್ಟಿಗಳ ಮೇಲೆ ಈ ಲೆಕ್ಕಗಳ ಪರಿಣಾಮವನ್ನು ನಾವು ಖಚಿತಪಡಿಸಿಕೊಳ್ಳಲಾಗಿಲ್ಲ.

ಬಿ. ಲೆಕ್ಕಪತ್ರಗಳ ಮೇಲಿನ ಟಿಪ್ಪಣಿ ಸಂಖ್ಯೆ 28–II–15 ರಲ್ಲಿ ಹೇಳಿರುವ ಉಳಿಕೆ ಹಣದ ಸ್ಥಿರೀಕರಣದ ಬಗೆಗೆ.

ಈ ದಿಸೆಯಲ್ಲಿ 31–3–2014ರಂದು ಇರುವ ಉಳಿಕೆ ಹಣದ ಬಗೆಗೆ ಸಾಲಗಳು ಮತ್ತು ಮುಂಗಡಗಳ ಮತ್ತು ಠೇವಣಿಗಳ ಬಗೆಗಿನ ಎಲ್ಲಾ ಸಾಲಗಾರರಿಗೂ ಪತ್ರಗಳನ್ನು ಬರೆಯಲಾಗಿದೆ. 31–3–2014ರಲ್ಲಿನ ಉಳಿಕೆ ಹಣದ ಸ್ಥಿರೀಕರಣವನ್ನು ಶಾಸನಬದ್ಧ ಲೆಕ್ಕ ಪರಿಶೋಧಕರಿಗೆ ನೇರವಾಗಿ ಕಳುಹಿಸುವಂತೆ ಕೋರಲಾಗಿದೆ.

ನಾವು ಕೆಲವು ಸ್ಥಿರೀಕರಣಗಳನ್ನು ಸ್ವೀಕರಿಸಿದ್ದೇವೆ ಮತ್ತು ಠೇವಣಿಗಳು ಸ್ಥಿರೀಕರಣ ಮತ್ತು ಹೊಂದಾಣಿಕೆಗಳಿಗೊಳಪಟ್ಟಿವೆ.

ಈ ಸನ್ನಿವೇಶದಲ್ಲಿ ಕಂಪನಿಯ ಆರ್ಥಿಕ ಸ್ಥಿತಿವಿವರಣಾ ಪಟ್ಟಿಗಳ ಮೇಲೆ ಈ ಲೆಕ್ಕಗಳ ಪರಿಣಾಮವನ್ನು ನಾವು ಖಚಿತಪಡಿಸಿಕೊಳ್ಳಲಾಗಿಲ್ಲ.

ಷರತ್ತುಬದ್ಧ ಅಭಿಪ್ರಾಯ :

ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ನೀಡಿದ ವಿವರಣೆಗಳ ಪ್ರಕಾರ, ಲೆಕ್ಕ ಪತ್ರಗಳು ಪ್ರಮುಖವಾದ ಲೆಕ್ಕಪತ್ರಗಳನ್ನಿಡುವ ವಿಧಾನಗಳಿಗನುಸಾರವಾಗಿದ್ದು, ಷರತ್ತುಬದ್ಧ ಅಭಿಪ್ರಾಯಗಳ ವಿಷಯಗಳ ಪ್ಯಾರಾದಲ್ಲಿ ಹೇಳಿದ ಪರಿಣಾಮವನ್ನು ಹೊರತು ಪಡಿಸಿ ಕಂಪನಿಗಳ ಕಾಯಿದೆಯಲ್ಲಿ ತಿಳಿಸಿದ ರೀತಿ ಮಾಹಿತಿ ನೀಡುತ್ತವೆ. ಇದು ಭಾರತದಲ್ಲಿ ಒಪ್ಪಿಗೆಯಾಗಿರುವ ಲೆಕ್ಕಪತ್ರಗಳನ್ನಿಡುವ ನೀತಿ/ ತತ್ವಗಳಿಗನುಗುಣವಾಗಿದ್ದು:

ಎ. 31–3–2014ರಲ್ಲಿದ್ದಂತೆ ಸ್ಥಿತಿ ವಿವರಣಾ ಪಟ್ಟಿಯ ಬಗೆಗೆ, ಕಂಪನಿಯ ವ್ಯವಹಾರ ಸ್ಥಿತಿಯ ಬಗೆಗೆ,

ಬಿ. 31–3–2014ರಕ್ಕೆ ಕೊನೆಗೊಂಡ ವರ್ಷಕ್ಕೆ, ಕಂಪನಿಯ ಲಾಭ ಮತ್ತು ನಷ್ಟದ ತಪ್ಸೀಲು ಬಗೆಗೆ, ಕಂಪನಿಯ ಲಾಭದ ಬಗೆಗೆ,

ಸಿ. ಆ ದಿನಾಂಕಕ್ಕೆ ಕೊನೆಗೊಂಡ ವರ್ಷಕ್ಕೆ, ಹಣ ಹರಿವಿನ ತಪ್ಸೀಲು ಬಗೆಗೆ, ಹಣ ಹರಿವಿನ ಬಗೆಗೆ, ನೈಜ ಮತ್ತು ನ್ಯಾಯಬದ್ಧ ನೋಟವನ್ನು ನೀಡುತ್ತವೆ.

ಷರತ್ತುಬದ್ಧ ಅಭಿಪ್ರಾಯದ ಬಗೆಗಿನ ಒತ್ತು :

ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಯ ಟಿಪ್ಪಣಿ ಸಂಖ್ಯೆ 28–11–19ರಲ್ಲಿ ಹೇಳಲಾಗಿರುವಂತೆ ವಿವಿಧ ರೈತರು ಕಂಪನಿಯ ಮೇಲೆ ಹೂಡಿರುವ ಕೋರ್ಟ್ ವ್ಯಾಜ್ಯಗಳ ಫಲಿತಾಂಶದ ಅನಿಶ್ಚಿತತೆ ಬಗೆಗೆ ಗಮನವನ್ನು ನಾವು ಸೆಳೆಯುತ್ತೇವೆ. ನಮ್ಮ ಅಭಿಪ್ರಾಯವು ಈ ವಿಷಯದಲ್ಲಿ ಷರತ್ತುಬದ್ಧವಾಗಿಲ್ಲ.

ನ್ಯಾಯಿಕ ಮತ್ತು ನಿಯಂತ್ರಕ ಅವಶ್ಯಕತೆಗಳ ಬಗೆಗೆ ವರದಿ :

1. ಕಂಪನಿ ಕಾಯಿದೆ ಸೆಕ್ಷನ್ 227ರ ಉಪಸೆಕ್ಷನ್(4ಎ)ರ ಅಡಿಯಲ್ಲಿ ಭಾರತ ಸರ್ಕಾರ ಹೊರಡಿಸಿದ ಕಂಪನಿಗಳ (ಲೆಕ್ಕ ಪರಿಶೋಧಕರ ವರದಿ) ಆದೇಶ 2003ರಲ್ಲಿನ ಸೂಚನೆಯಂತೆ, ನಾವು ಈ ಆದೇಶದ ಪ್ಯಾರಾ 4 ಮತ್ತು 5ರಲ್ಲಿ ನಿಗದಿ ಪಡಿಸಿದ ವಿಷಯಗಳ ಬಗೆಗೆ ನಾವು ಈ ರೀತಿ ವರದಿ ನೀಡುತ್ತೇವೆ.

2. ಕಂಪನಿ ಕಾಯಿದೆ ಸೆಕ್ಷನ್ 227(3)ರಲ್ಲಿ ಅವಶ್ಯಕವಿರುವಂತೆ, ನಾವು ಈ ರೀತಿ ವರದಿ ನೀಡುತ್ತೇವೆ.

   ಎ) ನಮ್ಮ ಲೆಕ್ಕಪರಿಶೋಧನೆಗೆ ಬೇಕಾದುದೆಂದು ನಾವು ನಂಬಿದ ಎಲ್ಲ ಮಾಹಿತಿ ಮತ್ತು ವಿವರಣೆಗಳನ್ನು ಪಡೆದುಕೊಂಡಿದ್ದೇವೆ.

   ಬಿ) ನಮ್ಮ ಅಭಿಪ್ರಾಯದಲ್ಲಿ ಕಾನೂನು ಪ್ರಕಾರ ಇಡಬೇಕಾದ ಲೆಕ್ಕದ ಪುಸ್ತಕಗಳನ್ನು, ನಾವು ಪರಿಶೀಲಿಸಿದ ಮಟ್ಟಿಗೆ, ಕಂಪನಿಯು ಇಟ್ಟಿದೆ.

   ಸಿ) ಸ್ಥಿತಿ ವಿವರಣಾ ಪಟ್ಟಿ, ಲಾಭ ನಷ್ಟದ ತಖ್ತೆಲುಗಳು ಲೆಕ್ಕ ಪುಸ್ತಕಗಳೊಂದಿಗೆ ಹೊಂದಾಣಿಕೆಯಾಗುತ್ತವೆ.

   ಡಿ) ಷರತ್ತು ಬದ್ಧ ಅಭಿಪ್ರಾಯಗಳ ಬಗೆಗಿನ ಪರಿಣಾಮಗಳನ್ನು ತಿಳಿಸಿರುವ ಪ್ಯಾರದಲ್ಲಿ ಹೇಳಿರುವುದನ್ನು ಹೊರತುಪಡಿಸಿ, ಸ್ಥಿತಿ ವಿವರಣಾ ಪಟ್ಟಿ, ಲಾಭ ನಷ್ಟದ ತಖ್ತೆಲು, ಹಣ ಹರಿವಿನ ತಖ್ತೆಲು, ಕಂಪನಿಗಳ ಕಾಯಿದೆ 1956 ಸೆಕ್ಷನ್ 211(3)(ಸಿ)ರೊಂದಿಗೆ ಓದಲಾದ ಕಂಪನಿಗಳ ವ್ಯವಹಾರ ಮಂತ್ರಾಲಯವು ಹೊರಡಿಸಿರುವ ತಾ. 13–9–2013ರ ಸಾಮಾನ್ಯ ಸುತ್ತೋಲೆ 15/2013ರ ಪ್ರಕಾರ ಪಾಲಿಸಬೇಕಾದ ಲೆಕ್ಕಾಚಾರ ಶಾಸ್ತ್ರಗಳ ಮಾನದಂಡಗಳಿಗನುಸಾರವಾಗಿವೆ.

   ಇ) ನಿರ್ದೇಶಕರುಗಳಿಂದ ಸ್ವೀಕರಿಸಲಾದ ಮತ್ತು ನಿರ್ದೇಶಕರ ಮಂಡಳಿಯ ದಾಖಲೆಗಳಿಗೆ ಸೇರಿಸಲಾದ ವಿವರಣೆಗಳ ಆಧಾರದ ಮೇಲೆ 31–3–2014ರಂದು ಕಂಪನಿ ಕಾಯಿದೆ 1956 ಸೆಕ್ಷನ್ 274(1)(ಜಿ) ಪ್ರಕಾರ ಯಾವುದೇ ನಿರ್ದೇಶಕರು ನಿರ್ದೇಶಕರಾಗಿ ನಿಯುಕ್ತಿಗೊಳ್ಳಲು ಅನರ್ಹರಾಗಿಲ್ಲ.

ಸುಭಾಷ್ಚಂದ್ರ ಪಿ. ಕುದರಿ & ಕಂ. ಪರವಾಗಿ
ಛಾರ್ಟರ್ಡ್ ಅಕೌಂಟೆಂಟ್ಸ್
ಸಂಸ್ಥೆ ನೋ. ಸಂ. 004094S
ಸಹಿ/–
ಎಸ್.ಪಿ. ಕುದರಿ
ಮಾಲೀಕರು
ಸದಸ್ಯತ್ವ ಸಂಖ್ಯೆ : 020513

ಸ್ಥಳ : ಬೆಂಗಳೂರು
ತಾ : 1ನೇ ಸೆಪ್ಟೆಂಬರ್ 2014

ಸುಭಾಶ್‌ಚಂದ್ರ ಪಿ. ಕುದರಿ & ಕಂ.
ಛಾರ್ಟರ್ಡ್ ಅಕೌಂಟೆಂಟ್ಸ್

ನಂ. 15, 1ನೇ ಮಹಡಿ, 1ನೇ ಅಡ್ಡರಸ್ತೆ, ನೆಹರುನಗರ
ಶೇಷಾದ್ರಿಪುರಂ, ಬೆಂಗಳೂರ–560 020
ದೂರವಾಣಿ : 080–23564975/23564976

ಲೆಕ್ಕ ಪರಿಶೋಧಕರ ವರದಿಗೆ ಅನುಬಂಧ

ನಮ್ಮ ವರದಿಯ ಪ್ಯಾರಾ 1ರಲ್ಲಿನ ಇತರೇ ಶಾಸನ ಸಮ್ಮತ ಮತ್ತು ನಿಯಂತ್ರಕ ಅವಶ್ಯಕತೆಗಳು :

1. ಸ್ಥಿರಾಸ್ತಿಯ ಬಗೆಗೆ

   ಎ. ಲಭ್ಯವಿರುವ ಮಾಹಿತಿಗಳ ಪ್ರಕಾರ ಕಂಪನಿಯು ಯೋಗ್ಯ ದಸ್ತಾವೇಜುಗಳನ್ನು ಇಟ್ಟಿದ್ದು ಅವುಗಳಲ್ಲಿ ಪರಿಮಾಣಾತ್ಮಕ ಮತ್ತು ಸ್ಥಳದ ವಿವರಣೆಗಳನ್ನು ತೋರಿಸಲಾಗಿದೆ.

   ಬಿ. ಪ್ರಸಕ್ತ ವರ್ಷದಲ್ಲಿ ಸ್ಥಿರ ಆಸ್ತಿಗಳನ್ನು ಆಡಳಿತ ವರ್ಗವು ಭೌತಿಕವಾಗಿ ಪರಿಶೀಲಿಸಿದೆ. ನಮ್ಮ ಅಭಿಪ್ರಾಯದಲ್ಲಿ ಪರಿಶೀಲನಾ ಕಾರ್ಯಕ್ರಮವು ನ್ಯಾಯ ಸಮ್ಮತವಾಗಿದ್ದು. ಕಂಪನಿಯ ಗಾತ್ರ ವ್ಯವಹಾರ ಮತ್ತು ಸ್ವಭಾವಕ್ಕನುಗುಣವಾಗಿದೆ. ನಮಗೆ ಒದಗಿಸಿದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ ಯಾವುದೇ ಗಣನೀಯ ವ್ಯತ್ಯಾಸಗಳು ಕಂಡು ಬರಲಿಲ್ಲ.

   ಸಿ. ಪ್ರಸಕ್ತ ವರ್ಷದಲ್ಲಿ ನಮ್ಮ ಅಭಿಪ್ರಾಯದಲ್ಲಿ ಕಂಪನಿಯು ಸ್ಥಿರಾಸ್ತಿಯ ಗುರುತರ ಭಾಗವನ್ನು ವಿಕ್ರಯಿಸಿಲ್ಲ ಮತ್ತು ವ್ಯವಹಾರವನ್ನು ಮುಂದುವರಿಸಿಕೊಂಡು ಹೋಗುವ ಸ್ಥಿತಿಯ ಮೇಲೆ ಯಾವುದೇ ಪರಿಣಾಮವಿಲ್ಲ.

2. ವಸ್ತುಗಳ ಪಟ್ಟಿಯ ಬಗೆಗೆ

   ಎ. ನಮಗೆ ತಿಳಿಸಿದ ಹಾಗೆ ವಸ್ತುಗಳ ಪಟ್ಟಿಯನ್ನು ಆಡಳಿತ ವರ್ಗವು ಭೌತಿಕವಾಗಿ ಪರಿಶೀಲಿಸಿದೆ. ನಮ್ಮ ಅಭಿಪ್ರಾಯದಲ್ಲಿ ಪರಿಶೀಲನೆ ಮಾಡುವ ಅಂತರವು ನ್ಯಾಯ ಸಮ್ಮತವಾಗಿದ್ದು, ಕಂಪನಿಯ ಗಾತ್ರಕ್ಕನುಗುಣವಾಗಿರುತ್ತದೆ.

   ಬಿ. ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ಒದಗಿಸಿದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ ಆಡಳಿತ ವರ್ಗವು ಭೌತಿಕ ಪರಿಶೀಲನೆ, ವಸ್ತುಗಳ ಪಟ್ಟಿಯ ಪರಿಶೀಲನೆಗೆ ಅನುಸರಿಸಿದ ಕ್ರಮಗಳು ಸರಿಯಾಗಿದ್ದು, ಕಂಪನಿಯ ಗಾತ್ರ ಮತ್ತು ವ್ಯವಹಾರದ ಸ್ವಭಾವಕ್ಕನುಗುಣವಾಗಿದ್ದು ನ್ಯಾಯ ಸಮ್ಮತವಾಗಿರುತ್ತದೆ.

   ಸಿ. ಕಂಪನಿಯು ವಸ್ತುಗಳ ಬಗೆಗೆ ಸರಿಯಾದ ದಸ್ತಾವೇಜುಗಳನ್ನು ಹೊಂದಿದೆ. ನಮಗೆ ವಿವರಣೆ ನೀಡಿದ ಪ್ರಕಾರ, ಭೌತಿಕ ಪರಿಶೀಲನೆ ಮತ್ತು ವಸ್ತುಗಳ ಪಟ್ಟಿಗಳೊಂದಿಗೆ ತುಲನೆ ಮಾಡಿದಾಗ ಗುರುತರ ವ್ಯತ್ಯಾಸಗಳೇನು ಕಂಡು ಬಂದಿರುವುದಿಲ್ಲವೆಂದು ನಮಗೆ ತಿಳಿಸಲಾಗಿದೆ.

3. ಎ. ಕಂಪನಿಕಾಯಿದೆ 156 ಸೆಕ್ಷನ್ 301ರ ಪ್ರಕಾರ ಇಡಬೇಕಾದ ರಿಜಿಸ್ಟರ್‌ನಲ್ಲಿ ಗುತ್ತಿಗೆ ಮತ್ತು ವ್ಯವಸ್ಥೆಗಳ ಪ್ರಕಾರ ಮಾಡಲಾದ ವಹಿವಾಟುಗಳ ಬಗೆಗಿನ ದಾಖಲೆಗಳನ್ನು ದಾಖಲಿಸಲಾಗಿದೆ.

   ಬಿ. ಕಂಪನಿಯು ಯಾವುದೇ ಸಾಲಗಳನ್ನು ನೀಡದಿರುವುದರಿಂದ ಹಾಗೂ ಪಡೆಯದಿರುವುದರಿಂದ ಒಂದು ಲಕ್ಷ ರೂ. ಗಳಿಗೂ ಮೇಲ್ಪಟ್ಟ ಸಾಲ, ಮೇಲೊದಗಿ ಬಂದ ಸಾಲದ ಅಸಲು, ಬಡ್ಡಿ, ಮರುಪಾವತಿಗಳ ಬಗೆಗಿನ ಯಾವುದೇ ಷರತ್ತುಗಳು ಅನ್ವಯವಾಗುವುದಿಲ್ಲ.

4. ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ಒದಗಿಸಿದ ಮಾಹಿತಿ, ಕೊಟ್ಟ ವಿವರಣೆಗಳ ಪ್ರಕಾರ ಕಂಪನಿಯ ಗಾತ್ರ ಮತ್ತು ಅದರ ವ್ಯವಹಾರದ ಸ್ವಭಾವಕ್ಕನುಗುಣವಾಗಿ ವಸ್ತುಗಳ ಮತ್ತು ಸ್ಥಿರಾಸ್ತಿಗಳ ಮತ್ತು ಸೇವೆಗಳ ಮಾರಾಟ ಮುಂತಾದವುಗಳ ಬಗೆಗೆ ಆಂತರಿಕ ನಿಯಂತ್ರಣ ಕ್ರಮಗಳು ಸಾಕಷ್ಟಿವೆ.

5. ಕಂಪನಿಗಳ ಕಾಯಿದೆ 1956ರ, ಸೆಕ್ಷನ್ 301ರಲ್ಲಿ ಒಳಗೊಂಡ ವ್ಯವಹಾರಗಳ ಬಗೆಗೆ.

   ಎ. ನಮಗೆ ಕೊಟ್ಟ ಮಾಹಿತಿ ಹಾಗೂ ವಿವರಣೆಗಳ ಪ್ರಕಾರ, ಕಂಪನಿಗಳ ಕಾಯಿದೆ 1956ರ ಸೆಕ್ಷನ್ 301ರ ಪ್ರಕಾರ ಇಡಬೇಕಾದ ರಿಜಿಸ್ಟರುಗಳಲ್ಲಿ ದಾಖಲಿಸಬೇಕಾದ ವಹಿವಾಟುಗಳನ್ನು ದಾಖಲಿಸಲಾಗಿದೆ.

   ಬಿ. ನಮಗೆ ಕೊಟ್ಟ ಮಾಹಿತಿ ಹಾಗೂ ವಿವರಣೆಗಳ ಪ್ರಕಾರ, ಕಂಪನಿಗಳ ಕಾಯಿದೆ 1956 ಸೆಕ್ಷನ್301ರ ಪ್ರಕಾರ ಇಡಬೇಕಾದ ರಿಜಿಸ್ಟರ್‌ನಲ್ಲಿ ಯಾವುದೇ ಒಬ್ಬ ಪಕ್ಷಾಕಾರರ ಜೊತೆ ಒಟ್ಟಾರೆ ವರ್ಷದಲ್ಲಿ ರೂ. 5,00,000/– ಮೌಲ್ಯದ ವಹಿವಾಟನ್ನು ದಾಖಲಿಸುವ ಅಗತ್ಯವಿಲ್ಲವೆಂದು ನಾವು ಅಭಿಪ್ರಾಯ ಪಡುತ್ತೇವೆ.

6. ಕಂಪನಿಯು ಸಾರ್ವಜನಿಕರಿಂದ ಯಾವುದೇ ಠೇವಣಿಗಳನ್ನು ಸ್ವಿಕರಿಸಿಲ್ಲ. ಆದ್ದರಿಂದ 1956ರ ಕಂಪನಿಗಳ ಕಾಯಿದೆ ಸೆಕ್ಷನ್ 58ಎ, 58ಎಎ ಅನ್ವಯವಾಗುವುದಿಲ್ಲ.

7. ಕಂಪನಿಯು ತನ್ನದೇ ಆದ ಆಂತರಿಕ ಲೆಕ್ಕ ಪರಿಶೋಧನಾ ವ್ಯವಸ್ಥೆಯನ್ನು ಹೊಂದಿದ್ದು ನಮ್ಮ ಅಭಿಪ್ರಾಯದಲ್ಲಿ ಅದು ಕಂಪನಿಯ ಗಾತ್ರ ಮತ್ತು ಸ್ವಭಾವಕ್ಕನುಗುಣವಾಗಿದೆ.

8. ಭಾರತ ಸರ್ಕಾರವು 1956ರ ಕಂಪನಿಗಳ ಕಾಯಿದೆ ಪ್ರಕಾರ ಸೆಕ್ಷನ್ 209(1)ರ ಅನ್ವಯ ಇಟ್ಟಿರುವ ಕಾಸ್ಟ್ ದಾಖಲೆಗಳನ್ನು ನಾವು ಪರಿಶೀಲಿಸಿದ್ದೇವೆ ಮತ್ತು ಮೇಲ್ನೋಟಕ್ಕೆ ಕಂಪನಿಯು ಕಾಸ್ಟ್ ದಾಖಲೆಗಳನ್ನು ಇಟ್ಟಿದೆ ಎಂದು ಅಭಿಪ್ರಾಯ ಪಡುತ್ತೇವೆ. ಆದಾಗ್ಯೂ, ಕಾಸ್ಟ್ ದಾಖಲೆಗಳನ್ನು ಅವುಗಳು ನಿಖರವಾಗಿದಯೇ ಮತ್ತು ಸಂಪೂರ್ಣವಾಗಿದೆಯೇ ಎಂದು ನಿರ್ಧರಿಸಲು ನಾವು ವಿಸ್ತೃತ ಪರೀಕ್ಷೆಯನ್ನು ನಡೆಸಿಲ್ಲ.

9. ಕಾನೂನುಬದ್ಧ ಬಾಕಿಗಳ ಬಗೆಗೆ, ನಮಗೆ ಕೊಟ್ಟ ಮಾಹಿತಿ ಮತ್ತು ವಿವರಣೆಗಳ ಪ್ರಕಾರ :

   ಎ. ಕಂಪನಿಯು, ಪಿ.ಎಫ್., ಇಎಸ್ಐ, ಆದಾಯ ತೆರಿಗೆ, ಮಾರಾಟ ತೆರಿಗೆ, ಐಶ್ವರ್ಯ ತೆರಿಗೆ, ಸೀಮಾ ಸುಂಕ, ಅಬ್ಕಾರಿ ಸುಂಕ ಮತ್ತು ಇತರೆ ಕಾನೂನು ಬದ್ಧ ಬಾಕಿಗಳನ್ನು ಕ್ರಮಬದ್ದವಾಗಿ ಠೇವಣಿಯಿಡುತ್ತದೆ. ಕಂಪನಿಗಳ ದಾಖಲೆಗಳ ಪ್ರಕಾರ ಮತ್ತು ನಮಗೆ ನೀಡಲಾದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ ಯಾವುದೇ ಪಿ.ಎಫ್., ಆದಾಯ ತೆರಿಗೆ, ಮಾರಾಟ ತೆರಿಗೆ, ಐಶ್ವರ್ಯ ತೆರಿಗೆ, ಸೇವಾ ತೆರಿಗೆ, ಸೀಮಾ ಸುಂಕ, ಅಬ್ಕಾರಿ ಸುಂಕ ಮತ್ತು ಇನ್ನಾವ ಬಾಕಿಗಳು 31–03–2014ರಂದು 6 ತಿಂಗಳಿಗೂ ಅಧಿಕವಾಗಿ ಬಾಕಿ ಇರುವುದಿಲ್ಲ. ಆದರೆ ಲೆಕ್ಕಪತ್ರಗಳ ಟಿಪ್ಪಣಿ ಸಂ:II, 2(ii) ಮತ್ತು 28ಡಿ–21ಕ್ಕೆ ಸಂಬಂಧಿಸಿದಂತೆ ಗಮನವನ್ನು ಸೆಳೆಯಲಾಗಿದೆ.

   ಬಿ. ನಮಗೆ ನೀಡಲಾದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ ಮತ್ತು ದಾಖಲೆಗಳ ಪ್ರಕಾರ ಯಾವುದೇ ತಕರಾರಿಲ್ಲದ ಆದಾಯ ತೆರಿಗೆ, ಸೀಮಾ ಸುಂಕ, ಐಶ್ವರ್ಯ ತೆರಿಗೆ, ಕರ ಮತ್ತು ಮಾರಾಟ ತೆರಿಗೆಗಳು 31–3–2014ರಂದು ಈ ಕೆಳಕಂಡವನ್ನು ಹೊರತು ಪಡಿಸಿ ಬಾಕಿ ಇರುವುದಿಲ್ಲ.

ಕ್ರಮ ಸಂಖ್ಯೆ	ಕಾಯಿದೆ	ಬಾಕಿಯಿರುವ ಸ್ವಭಾವ	ತಕರಾರು ಬಾಕಿಯಿರುವ ಸಂಸ್ಥೆ	ಮೊತ್ತ (ಲಕ್ಷಗಳಲ್ಲಿ)	ಷರಾ
1	2	3	4	5	6
1.	ಕರ್ನಾಟಕ ಸರಕುಗಳ ಪ್ರವೇಶ ತೆರಿಗೆ ಕಾಯಿದೆ	1998–99ನೇ ಕರ ನಿರ್ಧರಣಾ ವರ್ಷದ ಪ್ರವೇಶ ತೆರಿಗೆ	ಕರ್ನಾಟಕ ಅಪೆಲೇಟ್ ಟ್ರಿಬ್ಯೂನಲ್	2.29	ಟ್ರಿಬ್ಯೂನಲ್, ಪ್ರಕರಣವನ್ನು ವಜಾ ಮಾಡಿದೆ ಮತ್ತು ಡಿಸಿಸಿಟಿ. ರಾಯಚೂರು ಅವರಿಗೆ ಪರಿಷ್ಕೃತ ಬೇಡಿಕೆ ನೋಟೀಸ್ ಕಳುಹಿಸಲು ಸೂಚಿಸಿದ್ದು, ಆದೇಶವನ್ನು ನಿರೀಕ್ಷಿಸಲಾಗುತ್ತಿದೆ.
2.	ಕರ್ನಾಟಕ ಸರಕುಗಳ ಪ್ರವೇಶ ತೆರಿಗೆ ಕಾಯಿದೆ	2001–02ನೇ ಕರ ನಿರ್ಧರಣಾ ವರ್ಷದ ಪ್ರವೇಶ ತೆರಿಗೆ	ವಾಣಿಜ್ಯ ತೆರಿಗೆಗಳ ಜಂಟೀ ಕಮೀಷನರ್ (ಅಪೀಲ್ಸ್) ಗುಲ್ಬರ್ಗಾ	4.41	ಗುಲ್ಬರ್ಗಾದ ವಾಣಿಜ್ಯ ತೆರಿಗೆಗಳ ಜಂಟೀ ಕಮೀಷನರ್ (ಅಪೀಲುಗಳು) ಗುಲ್ಬರ್ಗಾ (ಅಪೀಲ್ಸ್) ಅವರು ಮೇಲ್ಮನವಿಯನ್ನು ಪುರಸ್ಕರಿಸಿ ಡಿಸಿಸಿಟಿ ಯವರಿಗೆ ತೆರಿಗೆಯನ್ನು ಪುನಃ ಲೆಕ್ಕ ಹಾಕಿ ಪರಿಷ್ಕೃತ ಬೇಡಿಕೆ ನೋಟೀಸ್ ಕೊಡುವಂತೆ ತಿಳಿಸಿದ ಪ್ರಕಾರ ಆದೇಶ ಮತ್ತು ನೋಟೀಸ್‌ಗಳನ್ನು ನಿರೀಕ್ಷಿಸಲಾಗುತ್ತಿದೆ

3.	ಆದಾಯ ತೆರಿಗೆ ಕಾಯಿದೆ	2008–09 ಕರ ನಿರ್ಧಾರಣ ವರ್ಷ	ಆದಾಯ ತೆರಿಗೆ ಅಪೀಲೆಟ್ ಟ್ರಿಬ್ಯುನಲ್ ಬೆಂಗಳೂರು	93.77	ಡಿಸಿಐಟಿರವರು ಟ್ರಿಬ್ಯುನಲ್ ಮುಂದೆ ಮೇಲ್ಮನವಿ ಸಲ್ಲಿಸಿರುತ್ತಾರೆ
4.	ಆದಾಯ ತೆರಿಗೆ ಕಾಯಿದೆ	2009–10ರ ಕರ ನಿರ್ಧಾರಣ ವರ್ಷ	ಕಮೀಷನರ್ ಆಫ್ ಇನ್‌ಕಂ ಟ್ಯಾಕ್ಸ್ (ಅಪೀಲುಗಳು) ಬೆಂಗಳೂರು	190.89	ಸಿಐಟಿ(ಅಪೀಲು)ರವರ ಮುಂದೆ ಮೇಲ್ಮನವಿ ಸಲ್ಲಿಸಲಾಗಿದೆ
5.	ಆದಾಯ ತೆರಿಗೆ ಕಾಯಿದೆ	2010–11ರ ಕರ ನಿರ್ಧಾರಣ ವರ್ಷ	ಆದಾಯ ತೆರಿಗೆ ಕಮೀಷನರ್ (ಅಪೀಲುಗಳು) ಬೆಂಗಳೂರು	706.02	ಸಿಐಟಿ(ಅಪೀಲು)ರವರ ಮುಂದೆ ಮೇಲ್ಮನವಿ ಸಲ್ಲಿಸಲಾಗಿದೆ
6.	ಆದಾಯ ತೆರಿಗೆ ಕಾಯಿದೆ	2011–12ರ ಕರ ನಿರ್ಧಾರಣ ವರ್ಷ	ಕಮೀಷನರ್ ಆಫ್ ಇನ್‌ಕಂ ಟ್ಯಾಕ್ಸ್ (ಅಪೀಲುಗಳು) ಬೆಂಗಳೂರು	66.74	ಸಿಐಟಿ(ಅಪೀಲು)ರವರ ಮುಂದೆ ಮೇಲ್ಮನವಿ ಸಲ್ಲಿಸಲಾಗಿದೆ
7.	ಕೇಂದ್ರ ಅಬಕಾರಿ ಕಾಯಿದೆ	2006–07 ಮತ್ತು 2011–12ನೇ ವರ್ಷಗಳ ಚಿನ್ನದ ಮಾರಾಟದ ಮೇಲಿನ ಅಬಕಾರಿ ಸುಂಕ (100 ಲಕ್ಷ ರೂ.ಗಳ ಠೇವಣಿಯನ್ನು ಹೊಂದಾಣಿಕೆ ಮಾಡಿದ ನಂತರ)	ಕೇಂದ್ರ ಅಬ್ಕಾರಿ ಸುಂಕ ಟ್ರಿಬ್ಯುನಲ್ ಬೆಂಗಳೂರು	14,037.27	ಕೇಂದ್ರ ಅಬಕಾರಿ ಸುಂಕ ಮತ್ತು ಸೀಮಾ ಸುಂಕ ಕಮೀಷನರ್, ಬೆಳಗಾಂರವರು 1–01–2007 ರಿಂದ 31–12–2011ರ ವರೆಗೆ ಅಬಕಾರಿ ಸುಂಕವನ್ನು ಹೇರಿದ ಆದೇಶಕ್ಕೆ ಕಂಪನಿಯು ನೀಡಿದ ಉತ್ತರವನ್ನು ತಿರಸ್ಕರಿಸಿ ಅಬಕಾರಿ ಸುಂಕವನ್ನು ವಿಧಿಸಿದ ಆದೇಶವನ್ನು ಮಾಡಿರುತ್ತಾರೆ.
		ದಂಡ	ಕೇಂದ್ರ ಅಬ್ಕಾರಿ ಸುಂಕ ಟ್ರಿಬ್ಯುನಲ್, ಬೆಂಗಳೂರು	14,137.27	ಪ್ರಸ್ತುತ ವರ್ಷದಲ್ಲಿ ಟ್ರಿಬ್ಯುನಲ್ ತಡೆಯಾಜ್ಞೆ ನೀಡಿರುತ್ತದೆ

10. ಆರ್ಥಿಕ ವರ್ಷಾಂತ್ಯದಲ್ಲಿ ಕಂಪನಿಯು ಸಂಚಿತ ನಷ್ಟಗಳನ್ನು ಹೊಂದಿಲ್ಲ. ಪರಿಶೋಧನಾ ವರ್ಷದಲ್ಲಿ ಮತ್ತು ನಿಕಟ ಪೂರ್ವ ವರ್ಷದಲ್ಲಿಯೂ ಸಹ ಕಂಪನಿಯು ನಗದು ನಷ್ಟವನ್ನು ಅನುಭವಿಸಿಲ್ಲ.

11. ಕಂಪನಿಯು, ವರದಿಯ ವರ್ಷದಲ್ಲಿ ಯಾವುದೇ ಬ್ಯಾಂಕಿಗೆ ಅಥವಾ ಆರ್ಥಿಕ ಸಂಸ್ಥೆಗಳಿಗೆ ಕೊಡಬೇಕಾದ ಯಾವುದೇ ಬಾಕಿಯೂ ಇರುವುದಿಲ್ಲ ಮತ್ತು ಹಾಗಾಗಿ ಮರುಪಾವತಿಯ ಪ್ರಶ್ನೆಯು ಉದ್ಭವಿಸುವುದಿಲ್ಲ.

12. ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ಕೊಟ್ಟ ವಿವರಣೆಗಳು ಮತ್ತು ಮಾಹಿತಿಗಳನ್ನು ಆಧರಿಸಿ, ಕಂಪನಿಯು ಯಾವುದೇ ಸಾಲಗಳನ್ನು ಮತ್ತು ಮುಂಗಡಗಳನ್ನು, ಷೇರುಗಳು, ಡಿಬೆಂಚರ್‌ಗಳು ಮತ್ತು ಇತರೇ ಸೆಕ್ಯುರಿಟಿಗಳ ಭದ್ರತೆಗಳ ಆಧಾರದ ಮೇಲೆ ನೀಡಿಲ್ಲ.

13. ನಮ್ಮ ಅಭಿಪ್ರಾಯದಲ್ಲಿ ಕಂಪನಿಯು ಚೀಟಿ/ನಿಧಿ/ಮ್ಯೂಚುಯಲ್ ಫಂಡ್ ಅಥವಾ ಇನ್ನಾವುದೇ ರೀತಿಯ ಆರ್ಥಿಕ ವ್ಯವಹಾರ ನಡೆಸುವ ಸಂಘವಲ್ಲ. ಆದ್ದರಿಂದ ಕಂಪನಿಗಳ (ಲೆಕ್ಕ ಪರಿಶೋಧಕರ ವರದಿ) ಆದೇಶ 2003ರ ಉಪವಾಕ್ಯ 4(xiii) ಅನ್ವಯವಾಗುವುದಿಲ್ಲ.

14. ಮ್ಯೂಚುಯಲ್ ಫಂಡ್‌ಗಳಲ್ಲಿ ಮಾಡುವ ವಹಿವಾಟುಗಳ ಬಗೆಗೆ ಸಮಯಕ್ಕೆ ತಕ್ಕ ಬರವಣಿಗೆಗಳನ್ನು ದಾಖಲಿಸಲು ಸರಿಯಾದ ದಸ್ತಾವೇಜುಗಳನ್ನು ಕಂಪನಿಯು ಇಟ್ಟಿದೆ.

15. ಕಂಪನಿಯು ಬೇರೆಯವರು ಬ್ಯಾಂಕ್‌ಗಳು ಅಥವಾ ಹಣಕಾಸು ಸಂಸ್ಥೆಗಳಿಂದ ಪಡೆದ ಯಾವುದೇ ಸಾಲಗಳಿಗೆ ಖಾತ್ರಿಯನ್ನು ನೀಡಿರುವುದಿಲ್ಲ.

16. ಪ್ರಸ್ತುತ ವರ್ಷದಲ್ಲಿ ಕಂಪನಿಯು ಯಾವುದೇ ಅವಧಿಸಾಲಗಳನ್ನು ಪಡೆದಿಲ್ಲ.

17. ನಮಗೆ ನೀಡಿದ ಮಾಹಿತಿಗಳು ಮತ್ತು ವಿವರಣೆಗಳು ಮತ್ತು ಒಟ್ಟಾರೆ ನಾವು ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಯ ಪರೀಕ್ಷೆಯ ಆಧಾರದ ಮೇಲೆ ಕಂಪನಿಯು ಅಲ್ಪಾವಧಿ ಹಣಕಾಸನ್ನು ದೀರ್ಘಾವಧಿ ಹೂಡಿಕೆಗಳಿಗಾಗಿ ಬಳಸಿಕೊಂಡಿಲ್ಲವೆಂದು ನಾವು ವರದಿ ಮಾಡುತ್ತೇವೆ.

18. ಕಂಪನಿ ಕಾಯಿದೆ 1956ರ ಸೆಕ್ಷನ್ 301ರಡಿಯಲ್ಲಿ ಇಡಲಾದ ರಿಜಿಸ್ಟರ್‌ನಲ್ಲಿ ದಾಖಲಿಸಬೇಕಾದ ಪಕ್ಷಕಾರುಗಳಿಗೆ, ಕಂಪನಿಯು ಯಾವುದೇ ಷೇರುಗಳನ್ನು ವಿಶೇಷ ಹಕ್ಕಿನ ಆಧಾರದ ಮೇಲೆ ನೀಡಿಲ್ಲ.

19. ಪ್ರಸ್ತುತ ವರ್ಷದಲ್ಲಿ, ಕಂಪನಿಯು ಯಾವುದೇ ಡಿಬೆಂಚರ್‌ಗಳನ್ನು ನೀಡಿಲ್ಲ.

20. ಪ್ರಸ್ತುತ ವರ್ಷದಲ್ಲಿ, ಕಂಪನಿಯು, ಸಾರ್ವಜನಿಕರಿಗೆ ಷೇರುಗಳನ್ನು ಬಿಡುಗಡೆ ಮಾಡಿರುವುದಿಲ್ಲ.

21. ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ನೀಡಿದ ಮಾಹಿತಿಗಳು ಮತ್ತು ವಿವರಣೆಗಳ ಆಧಾರದ ಮೇಲೆ, ಕಂಪನಿಯು ಮಾಡಿರುವ ಅಥವಾ ಕಂಪನಿಯ ಮೇಲೆ ಮಾಡಲಾಗಿರುವ ಯಾವುದೇ ವಂಚನೆಯನ್ನು, ಆರ್ಥಿಕ ತಪ್ಪೀಲುಗಳು ಗಣ್ಯ ಅಪಹೇಳಿಕೆಗಳನ್ನು ಉಂಟುಮಾಡ ಬಹುದಾದ ಯಾವುದೇ ಸಂಗತಿಗಳನ್ನು ನಾವು ಗಮನಿಸಿಲ್ಲ ಮತ್ತು ವರದಿ ನೀಡಿಲ್ಲ.

ಸ್ಥಳ : ಬೆಂಗಳೂರು
ತಾ : 1ನೇ ಸೆಪ್ಟೆಂಬರ್ 2014

ಸುಭಾಶ್ಚಂದ್ರ ಪಿ. ಕುದರಿ & ಕಂ. ಪರವಾಗಿ
ಛಾರ್ಟರ್ಡ್ ಅಕೌಂಟೆಂಟ್ಸ್
ಸಂಸ್ಥೆ ನೋ. ಸಂ. 004094S
ಸಹಿ/–
ಎಸ್.ಪಿ. ಕುದರಿ
ಮಾಲೀಕರು
ಸದಸ್ಯತ್ವ ಸಂಖ್ಯೆ : 020513

31ನೇ ಮಾರ್ಚ್ 2014ಕ್ಕೆ ಕೊನೆಗೊಂಡ ವರ್ಷಕ್ಕೆ ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್, ಬೆಂಗಳೂರು ಇದರ ಲೆಕ್ಕಪತ್ರಗಳ ಬಗ್ಗೆ 1956ರ ಕಂಪೆನಿಗಳ ಕಾಯ್ದೆಯ ಪ್ರಕರಣ 619(4) ಅನುಸಾರ ಕಂಪ್ಟ್ರೋಲರ್ ಅಂಡ್ ಆಡಿಟರ್ ಜನರಲ್ ಆಫ್ ಇಂಡಿಯಾರವರ ಟಿಪ್ಪಣಿ.

1956ರ ಕಂಪೆನಿಗಳ ಕಾಯ್ದೆಯನ್ವಯ ನಿಗದಿಪಡಿಸಲಾದ ಆರ್ಥಿಕ ವರದಿ ಚೌಕಟ್ಟಿನನುಸಾರ **31ನೇ ಮಾರ್ಚ್ 2014ಕ್ಕೆ** ಕೊನೆಗೊಂಡ ವರ್ಷಕ್ಕೆ **ದಿ ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್, ಬೆಂಗಳೂರು** ಇದರ ಆರ್ಥಿಕ ವರದಿ ಸಿದ್ಧಪಡಿಸುವಿಕೆಯು ಕಂಪೆನಿಯ ಆಡಳಿತ ವರ್ಗದ ಜವಾಬ್ದಾರಿಯಾಗಿದೆ. 1956ರ ಕಂಪೆನಿಗಳ ಕಾಯ್ದೆಯ ಪ್ರಕರಣ 619(2)ರನ್ವಯ ಭಾರತದ ಕಂಪ್ಟ್ರೋಲರ್ ಆಡಿಟರ್ ಜನರಲ್ ಇವರಿಂದ ನೇಮಕವಾದ ಶಾಸನಬದ್ಧ ಲೆಕ್ಕ ಪರಿಶೋಧಕರು ಅವರ ವೃತ್ತಿಪರ ಸಂಸ್ಥೆಯಾದ ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ ಇವರಿಂದ ನಿಗದಿಪಡಿಸಲಾದ ಲೆಕ್ಕಪರಿಶೋಧನೆ ಮತ್ತು ಖಾತ್ರಿ ಮಾನಕಗಳಿಗನುಸಾರ ಸ್ವತಂತ್ರ ಪರಿಶೋಧನೆ ಆಧಾರದ ಮೇಲೆ 1956ರ ಕಂಪೆನಿಗಳ ಕಾಯ್ದೆಯ ಪ್ರಕರಣ 227ರ ಅನುಸಾರ ಈ ಆರ್ಥಿಕ ವರದಿಗಳ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸುವ ಜವಾಬ್ದಾರಿ ಹೊಂದಿರುತ್ತಾರೆ. ಇದನ್ನು ದಿನಾಂಕ **1ನೇ ಸೆಪ್ಟೆಂಬರ್ 2014** ಅವರ ಲೆಕ್ಕಪರಿಶೋಧನಾ ವರದಿ ಮಾಡಿರುವ ಮೇರೆ ಮಾಡಲಾಗಿದೆ ಎಂದು ಹೇಳಲಾಗಿದೆ.

ನಾನು ಭಾರತದ ಕಂಪ್ಟ್ರೋಲರ್ ಅಂಡ್ ಆಡಿಟರ್ ಜನರಲ್‌ರವರ ಪರವಾಗಿ **31ನೇ ಮಾರ್ಚ್ 2014ಕ್ಕೆ** ಕೊನೆಗೊಂಡ ವರ್ಷಕ್ಕೆ **ದಿ ಹಟ್ಟಿ ಗೋಲ್ಡ್ ಮೈನ್ಸ್ ಕಂಪೆನಿ ನಿಯಮಿತ, ಬೆಂಗಳೂರು** ರದರ ಆರ್ಥಿಕ ವರದಿಗಳ ಪೂರಕ ಲೆಕ್ಕಪರಿಶೋಧನೆಯನ್ನು 1956ರ ಕಂಪೆನಿಗಳ ಕಾಯ್ದೆಯ ಪ್ರಕರಣ 619(3)(ಬಿ) ಅನುಸಾರ ನಡೆಸಿದ್ದೇನೆ. ಈ ಪೂರಕ ಲೆಕ್ಕಪರಿಶೋಧನೆಯನ್ನು ಶಾಸನಬದ್ಧ ಲೆಕ್ಕಪರಿಶೋಧಕರುಗಳ ಕಾರ್ಯನಿರ್ವಹಣೆ ಕಾಗದ ಪತ್ರಗಳನ್ನು ಪರಿಶೀಲಿಸದೆ ಸ್ವತಂತ್ರವಾಗಿ ನಡೆಸಲಾಗಿದೆ ಮತ್ತು ಶಾಸನಬದ್ಧ ಲೆಕ್ಕಪರಿಶೋಧಕರುಗಳು ಹಾಗೂ ಕಂಪೆನಿ ಸಿಬ್ಬಂದಿಯ ವಿಚಾರಣೆಗೆ ಮತ್ತು ಕೆಲವು ಲೆಕ್ಕಪತ್ರ ದಾಖಲೆಗಳ ಆಯ್ದ ಪರಿಶೋಧನೆಗೆ ಪ್ರಾಥಮಿಕವಾಗಿ ಸೀಮಿತವಾಗಿದೆ. ನನ್ನ ಪೂರಕ ಲೆಕ್ಕ ಪರಿಶೋಧನಾ ಅವಲೋಕನಗಳ ಫಲವಾಗಿ ಲೆಕ್ಕ ಪರಿಶೋಧಕ ವರದಿಯಲ್ಲಿ ಮಾಡಲಾದ ಪರಿಷ್ಕರಣೆಗಳಿಂದಾಗಿ ನಾನು ಲೆಕ್ಕ ಪರಿಶೋಧಕರ ವರದಿಯ ಮೇಲಾಗಲಿ ಅಥವಾ ಅದಕ್ಕೆ ಪೂರಕವಾಗಿಯಾಗಲಿ ಯಾವುದೇ ಟಿಪ್ಪಣಿಗಳನ್ನು ಕಂಪನಿ ಕಾಯಿದೆ 1956 ಸೆಕ್ಷನ್ 619(4)ರಲ್ಲಿ ಮಾಡಲಿರುವುದಿಲ್ಲ.

ಭಾರತದ ಕಂಪ್ಟ್ರೋಲರ್ ಅಂಡ್
ಆಡಿಟರ್ ಜನರಲ್ ಇವರ ಪರವಾಗಿ

ಸಹಿ/–
(ಎಲ್.ಎ.ಸಿ. ಸಿಂಗ್)
ಪ್ರಿನ್ಸಿಪಾಲ್ ಅಕೌಂಟೆಂಟ್ ಜನರಲ್
(ಆರ್ಥಿಕ ಮತ್ತು ಆದಾಯವಲಯಗಳ ಆಡಿಟ್)
ಕರ್ನಾಟಕ, ಬೆಂಗಳೂರು

ಬೆಂಗಳೂರು
ದಿನಾಂಕ : 9ನೇ ಸೆಪ್ಟೆಂಬರ್ 2014

I ಲೆಕ್ಕ ಪತ್ರಗಳನ್ನಿಡುವ ಮಹತ್ವದ ನೀತಿಗಳು

1. ಲೆಕ್ಕ ಪತ್ರಗಳನ್ನಿಡುವ ವ್ಯವಸ್ಥೆ :

1.1 ಲೆಕ್ಕಪತ್ರಗಳನ್ನು 1956ರ ಕಂಪನಿಗಳ ಕಾಯಿದೆ ಸೆಕ್ಷನ್ 211ರ ಉಪವಿಧಿ (3ಸಿ)ಯಲ್ಲಿ ಉಲ್ಲೇಖಿಸಿದ ಲೆಕ್ಕಾಚಾರ ಮಾನದಂಡಗಳಿಗೆ ಅನುಗುಣವಾಗಿ, ಹಿಸ್ಟಾರಿಕಲ್ ಕಾಸ್ಟ್ ಅಡಿಯಲ್ಲಿ ಆರ್ಥಿಕ ತಃಖ್ತೆಗಳನ್ನು ತಯಾರಿಸಲಾಗಿದೆ.

1.2 ಆರ್ಥಿಕ ತಃಖ್ತೆಗಳನ್ನು ಲೆಕ್ಕಾಚಾರ ಮಾಡುವ ಮೂಲ ನಿಯಮಗಳಂತೆ, ಮುಂದುವರೆಸಿಕೊಂಡು ಹೋಗುವ ಸಂಸ್ಥೆಯೆಂಬ ಊಹೆಯನ್ನು ಗಮನದಲ್ಲಿಟ್ಟುಕೊಂಡು ಕೆಳಗೆ 2.5ರಲ್ಲಿ ಸೂಚಿಸಿರುವುದನ್ನು ಹೊರತು ಪಡಿಸಿ, ತಯಾರಿಸಲಾಗಿದೆ.

1.3 ನಿಗದಿತ ದಿನಾಂಕದಂದು ನಿಖರವಾಗಿ ತಿಳಿದುಕೊಳ್ಳುವ ಮತ್ತು ಆರ್ಥಿಕ ವರ್ಷದಲ್ಲಿ ಕೂಡಿಕೊಂಡು ಬರುವ ಖರ್ಚು ವೆಚ್ಚಗಳನ್ನು ಲೆಕ್ಕ ಪತ್ರಗಳಲ್ಲಿ ಕಾಣಿಸಲಾಗಿದೆ.

2. ವರಮಾನದ ಪರಿಗಣನೆ

2.1 ಮಾರಾಟಗಳಿಂದ ಬರುವ ಆದಾಯದಿಂದ ಸೋಡಿ ಮತ್ತು ತೆರಿಗೆಗಳನ್ನು ಕಳೆದು ನಿವ್ವಳ ಮೊತ್ತವನ್ನು ಲೆಕ್ಕಕ್ಕೆ ತೆಗೆದುಕೊಳ್ಳಲಾಗುವುದು.

2.2 ಚಿನ್ನದ ಮಾರಾಟವನ್ನು ಮಾರಾಟ ಮಾಡಿದ ವಾರದ ಮುಂಬೈ ಚಿನಿವಾರ ಪೇಟೆಯ ಸರಾಸರಿ ದರದ ಆಧಾರದಲ್ಲಿ ಅಥವಾ ದರಪಟ್ಟಿ (ಇನ್‌ವಾಯ್ಸ್) ತಯಾರು ಮಾಡುವ ದಿನದ ವಾರದವರೆಗಿನ ವಾರದ ಸರಾಸರಿ ದರದ ಆಧಾರದ ಮೇಲೆ ಲೆಕ್ಕ ಹಾಕಲಾಗುವುದು.

2.3 ಬೆಳ್ಳಿಯ ಮಾರಾಟವನ್ನು ದರಪಟ್ಟಿ(ಇನ್‌ವಾಯ್ಸ್) ತಯಾರು ಮಾಡಿದ ದಿನದಂದು ಇರುವ ಬೆಲೆಯ ಆಧಾರದ ಮೇಲೆ ಲೆಕ್ಕಾಚಾರ ಹಾಕಲಾಗುವುದು.

2.4 ಗಾಳಿಯಿಂದ ಉತ್ಪಾದಿಸಿದ ವಿದ್ಯುತ್ತನ್ನು ಕೆಪಿಟಿಸಿಎಲ್‌ನವರು ಕೊಡುವ ಬಿ ಫಾರಂ ಪ್ರಕಾರ ವಿದ್ಯುತ್ ಖರೀದಿ ಒಪ್ಪಂದದಂತೆ ಲೆಕ್ಕಾಚಾರ ಹಾಕಲಾಗುವುದು.

2.5 ಚೂರ–ಪಾರು ತ್ಯಾಜ್ಯವನ್ನು ಹಸ್ತಾಂತರಿಸುವ ಸಮಯದಲ್ಲಿನ ಆಧಾರದ ಮೇಲೆ ಲೆಕ್ಕಾಚಾರ ಮಾಡಲಾಗುವುದು.

2.6 ರೆವಿನ್ಯೂ ಅನುದಾನಗಳನ್ನು ಖರ್ಚು ಮಾಡಿದ ಅವಧಿಯಲ್ಲಿ ಸಂಬಂಧಪಟ್ಟ ವೆಚ್ಚಗಳಿಗೆ ಸರಿಹೊಂದಿಸಲು ಮಾನ್ಯಮಾಡಲಾಗುವುದು.

2.7 ವಿಮಾ ಕ್ಲೈಮುಗಳನ್ನು, ಅವುಗಳನ್ನು ಇತ್ಯರ್ಥ ಪಡಿಸಿದ ವರ್ಷದಲ್ಲಿ ಪರಿಗಣಿಸಲಾಗುವುದು.

3. ಸ್ಥಿರ ಆಸ್ತಿಗಳು

3.1 ಸ್ಥಿರ ಸ್ವತ್ತುಗಳ ಮೌಲ್ಯವನ್ನು ಸವಕಳಿ ಕಳೆದು ನಮೂದಿಸಲಾಗುವುದು. ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ ಕೆಲಸಗಳನ್ನು "ಚಾರಿತ್ರಿಕ ಬೆಲೆ" ಬೆಲೆಯ ಆಧಾರದ ಮೇಲೆ ನಮೂದಿಸಲಾಗುವುದು.

3.2 ವರ್ಜಿಸಿದ ಸ್ಥಿರ ಸ್ವತ್ತುಗಳು ಮತ್ತು ಪ್ರಗತಿಯಲ್ಲಿರುವ ಕೆಲಸಗಳನ್ನು ಅವುಗಳು ಅಗತ್ಯವಿಲ್ಲವೆಂದು ಪರಿಗಣಿಸಿದ ವರ್ಷದಲ್ಲೇ ಖರ್ಚುಗಳ ಬಾಬತ್ತಿನಲ್ಲಿ ತೋರಿಸಿಬಿಡಲಾಗುವುದು.

3.3 ವಿಸ್ತರಣೆಗೆ ನಿರ್ಮಾಣ ಹಂತದಲ್ಲಿ/ಆಧುನೀಕರಣಕ್ಕಾಗಿ, ಹಾಲಿಯಿರುವ ಘಟಕದ ಯಾಂತ್ರೀಕರಣಕ್ಕಾಗಿ ಮಾಡುವ ಬಂಡವಾಳ ಖರ್ಚುಗಳನ್ನು ಸಂಬಂಧಪಟ್ಟ ಪ್ರಾಜೆಕ್ಟ್/ಯೋಜನೆ ಪೂರ್ಣಗೊಂಡ ಬಳಿಕ ಬಂಡವಾಳಕ್ಕೆ ತೆಗೆದುಕೊಳ್ಳಲಾಗುವುದು.

3.4 ಹಾಲಿ ಇರುವ ಷಾಫ್ಟ್(ಗಣಿ)ಗಳನ್ನು ಆಳ ಮಾಡುವ ವೆಚ್ಚವನ್ನು ರೆವಿನ್ಯೂ ವೆಚ್ಚವೆಂದು ಪರಿಗಣಿಸಲಾಗುವುದು.

4. ಸವಕಳಿ

4.1 ಸ್ಥಿರ ಸ್ವತ್ತುಗಳ ಬಾಬ್ತು ಸವಕಳಿಯನ್ನು 1956ರ ಕಂಪನಿಗಳ ಕಾಯಿದೆ ಸೆಕ್ಷನ್ 205(2)(ಬಿ) ಮತ್ತು ಕಂಪನಿ ಕಾಯಿದೆಗಳ ಷೆಡ್ಯೂಲ್ 14ರಲ್ಲಿ ಸೂಚಿಸಿದ ದರಗಳ ಆಧಾರದ ಮೇಲೆ ನಿರ್ಧರಿಸಲಾಗುವುದು.

4.2 ಗಾಳಿಯಂತ್ರವನ್ನು ತಡೆರಹಿತವಾಗಿ ಕಾರ್ಯನಿರ್ವಹಿಸುವ ಯಂತ್ರವೆಂದು ಪರಿಗಣಿಸಿ ಕಂಪನಿಗಳ ಕಾಯಿದೆ 14ರ ಷೆಡ್ಯೂಲ್‌ನಲ್ಲಿ ನಮೂದಿಸಿದ ದರಗಳಂತೆ ಸವಕಳಿಗೆ ವ್ಯವಸ್ಥೆ ಮಾಡಲಾಗಿದೆ.

4.3 ಹಾಲಿಯಿರುವ ಸ್ವತ್ತುಗಳಿಗೆ ಸೇರ್ಪಡೆ ಮಾಡುವಾಗ, ಆ ಸ್ವತ್ತುಗಳು ಬಾಳಿಕೆ ಬರುವ ಉಳಿದ ಅವಧಿಯ ಆಧಾರದ ಮೇಲೆ ಸವಕಳಿ ಲೆಕ್ಕಾಚಾರ ಮಾಡಲಾಗುವುದು.

5. ಹೂಡಿಕೆಗಳು

ದೀರ್ಘ ಕಾಲೀನ ಹೂಡಿಕೆಗಳನ್ನು, ಅವುಗಳನ್ನು ಪಡೆದುಕೊಂಡ ದಿನದಂದು ಇದ್ದ ಬೆಲೆಯಲ್ಲಿ ಪರಿಗಣಿಸಲಾಗುವುದು, ಚಾಲ್ತಿಯಿರುವ ಹೂಡಿಕೆಗಳನ್ನು ಅವುಗಳ ಕನಿಷ್ಟ ಬೆಲೆ ಮತ್ತ ಮಾರುಕಟ್ಟೆಯ ಬೆಲೆಗಳಲ್ಲಿ ಯಾವುದು ಕಡಿಮೆಯೋ ಅದರ ಆಧಾರದ ಮೇಲೆ ಪ್ರತ್ಯೇಕ ಹೂಡಿಕೆ ಆಧಾರದ ಮೇಲೆ ಪರಿಗಣಿಸಲಾಗುವುದು.

6. ವಸ್ತುಗಳ ಮೌಲ್ಯಮಾಪನ

6.1 ಉಗ್ರಾಣ, ಬಿಡಿಭಾಗಗಳು ಮತ್ತು ಚಿಲ್ಲರೆ ಸಲಕರಣೆಗಳು.

6.1.1 ಉಗ್ರಾಣದ ವಸ್ತುಗಳು, ಬಿಡಿಭಾಗಗಳನ್ನು ತೂಕ – ಸರಾಸರಿ ಆಧಾರದ ಮೇಲೆ ಮೌಲ್ಯಮಾಪನ ಮಾಡಲಾಗುವುದು

6.1.2 ಬಿಡಿಭಾಗಗಳು/ತಯಾರಿಸಲಾದ ಬಳಕೆ ಮಾಡುವ ವಸ್ತುಗಳನ್ನು ಅಸಲು ಬೆಲೆಯ ಆಧಾರದ ಮೇಲೆ ಮೌಲ್ಯಮಾಪನ ಮಾಡಲಾಗುವುದು.

6.1.3 ರೂ.5000 ಅಥವಾ ಅದಕ್ಕೂ ಕಡಿಮೆ ಬೆಲೆಯ ಬಿಡಿ ಭಾಗಗಳನ್ನು, ಉಗ್ರಾಣದಿಂದ ಹೊರಗೆ ಕೊಟ್ಟಾಗ ಅವುಗಳನ್ನು ಲೆಕ್ಕದಿಂದ ಕಳೆದು ಹಾಕಲಾಗುವುದು. ರೂ.5000ಕ್ಕಿಂತ ಹೆಚ್ಚಿನ ಬೆಲೆಯ ಬಿಡಿ ಉಪಕರಣಗಳನ್ನು ವರ್ಷಕ್ಕೆ ಶೇ.50ರಂತೆ ಕಡಿಮೆ ಮಾಡುತ್ತಾ ಹೋಗಿ, ಅವುಗಳ ಬೆಲೆ ರೂ.5000 ಕ್ಕಿಂತ ಕಡಿಮೆಯಾದಾಗ ಅವುಗಳನ್ನು ಲೆಕ್ಕದಿಂದ ಕೈಬಿಡಲಾಗುವುದು.

6.2 ಸಿದ್ಧ ವಸ್ತುಗಳು

6.2.1 ಚಿನ್ನ: ಮುಂಬೈನ ಚಿನಿವಾರ ಪೇಟೆಯ ಉತ್ತಮಗುಣಮಟ್ಟದ ಚಿನ್ನದ ಬೆಲೆಯಲ್ಲಿ ಸೋಡಿ ಕಳೆದು, ಗಳಿಸಬಹುದಾದ ಕನಿಷ್ಟ ನಿವ್ವಳಬೆಲೆ.

6.2.2 ಬೆಳ್ಳಿ ವರ್ಷದಲ್ಲಿ ಸರಾಸರಿ ಕನಿಷ್ಠ ಬೆಲೆ, ಅಥವಾ ಮಾರುಕಟ್ಟೆಯ ಮುಕ್ತಾಯ ಬೆಲೆ.

6.3 ಪ್ರಗತಿಯಲ್ಲಿರುವ ಕೆಲಸ/ಕಾಮಗಾರಿ : ಅಂದಾಜು ಅಸಲು ವೆಚ್ಚ ಅಥವಾ ಗಳಿಸಬಹುದಾದ ನಿವ್ವಳ ಮೌಲ್ಯ ಇವುಗಳಲ್ಲಿ ಯಾವುದು ಕಡಿಮೆಯೋ ಅದು.

6.4 ಭೂಮಿ ಮೇಲಿರುವ ಅದಿರು ದಾಸ್ತಾನು : ಅಸಲು ವೆಚ್ಚ ಅಥವಾ ಗಳಿಸಬಹುದಾದ ನಿವ್ವಳ ಮೌಲ್ಯ ಇವುಗಳಲ್ಲಿ ಯಾವುದು ಕಡಿಮೆಯೋ ಅದು.

6.5 ಸಾಗಾಣಿಕೆಯಲ್ಲಿರುವ ಸರಕುಗಳು : ಅವುಗಳ ವಾಸ್ತವಿಕ ಬೆಲೆ

6.6 ಔಷಧಗಳು, ಕ್ಯಾಂಟೀನ್ ಮತ್ತು ಲೇಖನ ಸಾಮಗ್ರಿಗಳನ್ನು ಕೊಂಡ ಬೆಲೆಗೆ ಲೆಕ್ಕ ಹಾಕಿ, ಲೆಕ್ಕದಿಂದ ಕಳೆಯಲಾಗುವುದು, ಕಾರಣ ಅವುಗಳು ತಕ್ಷಣ ಬಳಕೆಗೆ ಬೇಕಾಗಿದ್ದು, ಮರು ಮಾರಾಟಕ್ಕೆ ಅಲ್ಲ.

7. ಮುಂದೂಡಿದ ರೆವಿನ್ಯೂ ವೆಚ್ಚಗಳು

7.1 ಹೊಸನಿಕ್ಷೇಪಗಳಿಗೆ/ಗುತ್ತಿಗೆ ನೀಡಿದವುಗಳಿಗೆ/ ಪ್ರದೇಶಗಳಲ್ಲಿ ಅನ್ವೇಷಣೆ/ನಿರೀಕ್ಷಣೆ/ ಹೆಚ್ಚಿನ ಹೊರೆ ತೆಗೆಯುವ ಮೇಲಿನ ವೆಚ್ಚಗಳನ್ನು ಮುಂದೂಡಿದ ರೆವಿನ್ಯೂ ವೆಚ್ಚಗಳೆಂದು ಪರಿಗಣಿಸಿ ಮುಂದಿನ 5 ವರ್ಷಗಳಲ್ಲಿ ಕಾರ್ಯ ನಿರ್ವಹಿಸುವ ಅವಧಿಯಲ್ಲಿ ಮೌಲ್ಯ ಕಡಿಮೆಯಾಗುತ್ತಾ ಹೋಗುವುದು. ಅಥವಾ ನಿಕ್ಷೇಪಗಳು ಲಾಭದಾಯಕ ಎಂದು ಸಾಬೀತಾಗುವವರೆಗೆ, ಯಾವುದು ಮೊದಲೋ, ಅಲ್ಲಿಯವರೆಗೆ ಪರಿಗಣಿಸಲಾಗುವುದು.

7.2 ಇತರ ಸಂಕೀರ್ಣ ವೆಚ್ಚಗಳನ್ನು 5 ವರ್ಷಗಳ ಅವಧಿಯಲ್ಲಿ ಕಡಿಮೆ ಮಾಡುತ್ತಾ ಹೋಗಲಾಗುವುದು.

8. ಸಿಬ್ಬಂದಿ ನಿವೃತ್ತಿ ಪ್ರಯೋಜನಗಳು

8.1 ಗ್ರ್ಯಾಚ್ಯುಯಿಟಿ ಹೊಣೆಗಾರಿಕೆಯನ್ನು ಭಾರತೀಯ ಜೀವ ವಿಮಾ ನಿಗಮದ ಗುಂಪು ಗ್ರ್ಯಾಚ್ಯುಯಿಟಿ ಅಡಿಯಲ್ಲಿದ್ದು ಅದನ್ನು ಗ್ರ್ಯಾಚ್ಯುಯಿಟಿ ವಿಶ್ವಸ್ತ ಮಂಡಳಿಯಿಂದ ನಿರ್ವಹಿಸುತ್ತಿದೆ. ವಿಮಾ ನಷ್ಟ ಮೌಲ್ಯ ಮಾಪನದ ಆಧಾರದ ಮೇಲೆ ಹಾಲಿ ಸೇವಾವೆಚ್ಚವನ್ನು ಲಾಭ ನಷ್ಟಗಳ ಲೆಕ್ಕಕ್ಕೆ ಹಾಕಲಾಗುವುದು.

8.2 ಭವಿಷ್ಯ ನಿಧಿ ವಂತಿಗೆಯನ್ನು ಅನುಮೋದಿಸಲಾದ ವಿಶ್ವಸ್ಥ ಮಂಡಳಿಗೆ/ಭವಿಷ್ಯ ನಿಧಿ ಅಧಿಕಾರಿಗಳಿಗೆ ಪಾವತಿಸಲಾಗಿದೆ. ಈ ವಂತಿಗೆಯಲ್ಲಿ ಲಾಭ/ನಷ್ಟ ಲೆಕ್ಕಕ್ಕೆ ತೆಗೆದುಕೊಳ್ಳಲಾಗಿದೆ..

8.3 ಸಿಬ್ಬಂದಿ/ನೌಕರರ ರಜಾ ನಗದೀಕರಣದ ಹೊಣೆಗಾರಿಕೆಯನ್ನು ಭಾರತೀಯ ಜೀವ ವಿಮಾ ನಿಗಮದ ಪಾಲಿಸಿಯಿಂದ ನಿಭಾಯಿಸಲಾಗುವುದು. ವಿಮಾ ನಷ್ಟ ಮೌಲ್ಯ ಮಾಪನದ ಆಧಾರದ ಮೇಲೆ ಹಾಲಿ ಸೇವಾವೆಚ್ಚವನ್ನು ಲಾಭ–ನಷ್ಟ ಲೆಕ್ಕದಲ್ಲಿ ತೆಗೆದುಕೊಳ್ಳಲಾಗುವುದು.

8.4 ಅರ್ಹ ಅಧಿಕಾರಿಗಳ ವಯೋ ನಿವೃತ್ತಿ ವೇತನದ ಪಾವತಿಗಾಗಿ ಕಂಪನಿಯ ವಂತಿಗೆಯನ್ನು (ಮೂಲವೇತನ ಮತ್ತು ತುಟ್ಟಿ ಭತ್ಯೆಗಳ ಶೇಕಡವಾರು) ಅನುಮೋದಿಸಿದ ವಿಶ್ವಸ್ಥ ಮಂಡಳಿಗೆ ಪಾವತಿಸಲಾಗುತ್ತಿದ್ದು ಅದನ್ನು ಭಾರತೀಯ ಜೀವ ವಿಮಾ ನಿಗಮವು ನಿರ್ವಹಿಸುತ್ತಿದೆ. ವಾರ್ಷಿಕ ವಂತಿಗೆಯನ್ನು ಲಾಭ–ನಷ್ಟಗಳ ಲೆಕ್ಕಕ್ಕೆ ತೆಗೆದುಕೊಳ್ಳಲಾಗುತ್ತಿದೆ.

8.5 ಸ್ವಯಂ ನಿವೃತ್ತಿ ಯೋಜನೆಯಲ್ಲಿನ ವೆಚ್ಚಗಳನ್ನು ಎ.ಎಸ್ 15(ಪರಿಷ್ಕರಿಸಿದ)ರಂತೆ ಲೆಕ್ಕಕ್ಕೆ ಹಾಕಲಾಗುವುದು.

8.6 25 ವರ್ಷಗಳ ದೀರ್ಘ ಕಾಲೀನ ಸೇವೆಗಾಗಿ ನೀಡುವ ಪುರಸ್ಕಾರದ ವೆಚ್ಚದ ಮುನ್ನೇರ್ಪಾಡನ್ನು ಅರ್ಹತೆ ಪಡೆದ ವರ್ಷದಲ್ಲಿ ವ್ಯವಸ್ಥೆ ಮಾಡಲಾಗುವುದು.

9. ಪೂರ್ವ ಪಾವತಿ ಖರ್ಚುಗಳು

500 ರೂ. ಗಳಿಗಿಂತ ಹೆಚ್ಚಿಗೆ ವೆಚ್ಚ ಮಾಡಿದ ಉದ್ದೇಶಗಳು ಮರುವರ್ಷವೂ ಫಲ ನೀಡುವ ಸಂದರ್ಭಗಳಲ್ಲಿ ಅವುಗಳನ್ನು ಪೂರ್ವಪಾವತಿ ವೆಚ್ಚಗಳೆಂದು ಪರಿಗಣಿಸಲಾಗುವುದು.

10. ವಿದೇಶಿ ವಿನಿಮಯ ವಹಿವಾಟು

ಎ) ವಿದೇಶಿ ವಿನಿಮಯ ವಹಿವಾಟುಗಳನ್ನು, ವಹಿವಾಟು ನಡೆಸಿದ ಸಮಯದಲ್ಲಿದ್ದ ವಿನಿಮಯ ದರದಂತೆ ದಾಖಲಿಸಲಾಗುವುದು. ಮುಂದಿನ ದಿನಗಳ ಗುತ್ತಿಗೆಗಳನ್ನು (ಫಾರ್ವ್‌ವರ್ಡ್ ಕಾಂಟ್ರಾಕ್ಟ್) ಮುಂದಿನ ದಿನ ಗುತ್ತಿಗೆ ದರಗಳಲ್ಲಿ ದಾಖಲಿಸಲಾಗುವುದು.

ಬಿ) ಮುಂದಿನ ದಿನಗಳ ಗುತ್ತಿಗೆಗಳಲ್ಲಿ ಸೇರಿರದ ವರ್ಷದ ಕೊನೆಯಲ್ಲಿ ಬಾಕಿಯಿರುವ ವಿದೇಶೀ ವಿನಿಮಯ ವಹಿವಾಟುಗಳ ಹೊಣೆಗಾರಿಕೆಯನ್ನು ವರ್ಷದ ಅಂತ್ಯದಲ್ಲಿ ದರಗಳೊಂದಿಗೆ ಸರಿದೂಗಿಸಿ, ವಿನಿಮಯ ಹಣದ ವ್ಯತ್ಯಾಸವನ್ನು ಲಾಭ–ನಷ್ಟದ ಲೆಕ್ಕಕ್ಕೆ ತೆಗೆದುಕೊಳ್ಳಲಾಗುವುದು.

ಸಿ) ಪಾವತಿಸುವ ಸಮಯದಲ್ಲಿ ಉಂಟಾಗುವ ವಿನಿಮಯ ವ್ಯತ್ಯಾಸಗಳನ್ನು ಲಾಭ–ನಷ್ಟದ ಲೆಕ್ಕದಲ್ಲಿ ಗುರುತಿಸಲಾಗುವುದು.

11. ಮುಂದೂಡಿದ ತೆರಿಗೆ ಹೊಣೆಗಾರಿಕೆ ಮತ್ತು ಹಾಲಿ ತೆರಿಗೆಗೆ ಮುನ್ನೇರ್ಪಾಡು

11.1 ಸಮಯದ ವ್ಯತ್ಯಾಸಗಳಿಂದ ಉಂಟಾಗುವ ಮತ್ತು "ಲೆಕ್ಕಾಚಾರಗಳಿಂದ ಆದಾಯ" ಮತ್ತು "ತೆರಿಗೆ ಪಾವತಿಗೆ ಒಳಪಟ್ಟ ಆದಾಯ"ಗಳ ನಡುವಿನ ವ್ಯತ್ಯಾಸಗಳು ಹಾಗೂ "ಪುಸ್ತಕ ಪ್ರಕಾರ ಮೌಲ್ಯ" (ಬುಕ್ ವ್ಯಾಲ್ಯೂ) ಮತ್ತು "1961ರ ಆದಾಯ ತೆರಿಗೆ ಕಾಯಿದೆ" ಮತ್ತು ಅದರಡಿ ರೂಪಿಸಿದ ನಿಯಮಗಳ ನಡುವಿನ ವ್ಯತ್ಯಾಸಗಳು ಇವುಗಳಿಂದ ಉಂಟಾಗುವ ತೆರಿಗೆ ಹೊಣೆಗಾರಿಕೆ ಮತ್ತು ತೆರಿಗೆ ಆಸ್ತಿಗಳನ್ನು, ಸ್ಥಿತಿ ವಿವರಣಾ ಪಟ್ಟಿಯ ದಿನಾಂಕದಂದು ಇರುವ ಪರಿಣಾಮಕಾರಿ ದರಗಳಂತೆ, ಎಎಸ್–22ರಂತೆ ಲೆಕ್ಕಾಚಾರ ಮಾಡಲಾಗುವುದು.

11.2 ಚಾಲ್ತಿ ತೆರಿಗೆ ಪಾವತಿಗೆ ಎಲ್ಲ ನ್ಯಾಯಬದ್ಧವಾದ ಕಡಿತಗಳನ್ನು ಪರಿಗಣಿಸಿ, 1961ರ ಆದಾಯ ತೆರಿಗೆ ಕಾಯಿದೆ ಮತ್ತು ಅದರಡಿ ಮಾಡಿರುವ ನಿಯಮಗಳಂತೆ ಅಂಗೀಕರಿಸಿದ, ಮುಂದಕ್ಕೆ ತೆಗೆದುಕೊಂಡು ಹೋಗಬಲ್ಲ ಮತ್ತು ಕಡಿತಗಳಲ್ಲದರ ಬಗ್ಗೆ ಮುನ್ನೇರ್ಪಾಡನ್ನು ಮಾಡಲಾಗಿದೆ.

12. ಮುನ್ನೇರ್ಪಾಡುಗಳು, ಸಂಭಾವ್ಯ ಹೊಣೆಗಾರಿಕೆಗಳು ಮತ್ತು ಸಂಭಾವ್ಯ ಆಸ್ತಿಗಳು

ಸಂಪನ್ಮೂಲಗಳು, ಆರ್ಥಿಕ ಪ್ರಯೋಜನಗಳನ್ನೊಳಗೊಂಡು ಹೊರ ಹೋಗುವ ಸಾಧ್ಯತೆಯಿಂದ, ಬಂದ ನಂಬಲಾರ್ಹ ಅಂದಾಜಿನ ಆಧಾರದ ಮೇಲೆ ಮುನ್ನೇರ್ಪಾಡುಗಳನ್ನು ಮಾಡಲಾಗಿದ್ದು, ಬಾಧ್ಯತಾ ಹೊಣೆಗಾರಿಕೆಯನ್ನು ತೀರಿಸಬೇಕಿರುತ್ತದೆ. ಸಂಭಾವ್ಯ ಹೊಣೆಗಾರಿಕೆಗಳು, ಗುರುತರವಾಗಿದ್ದರೆ, ಲೆಕ್ಕಪತ್ರಗಳ ಟಿಪ್ಪಣಿಗಳ ಮೂಲಕ ಪ್ರಕಟಿಸಲಾಗುವುದು. ಸಂಭಾವ್ಯ ಆಸ್ತಿಗಳನ್ನು/ಸ್ವತ್ತುಗಳನ್ನು ಮಾನ್ಯ ಮಾಡುವುದಿಲ್ಲ ಅಥವಾ ಒಂದು ವಿವೇಕಯುಕ್ತ ನೀತಿಯಂತೆ ಅವುಗಳನ್ನು ಆರ್ಥಿಕ ತಃಖ್ತೆಗಳಲ್ಲಿ ಪ್ರಕಟಪಡಿಸುವುದಿಲ್ಲ.